SRI H. M. CHANNABASAPPA.—It is not the mistake of the Hon'ble Speaker or the Hon'ble Ministers or the Hon'ble Members of this side or the other side. It has so happend that the question hour has closed within 45 minutes.

MADAM SPEAKER.—Now the House stands adjourned for half an hour.

[MADAM SPEAKER in the Chair]

The House adjourned at Fifty-three Minutes Past One of the Clock and re-assembled at Ten Minutes Past Two of the Clock.

SRI K. H RANGANATH (Minister for Co-operation).—I may kindly be pardoned, Madam Speaker, I thought that the Question Hour would go on for the full hour, and so I was in my chambers. I am really sorry that because of me the House had to be adjourned for some time. I request your excuse and I apologize to the House also.

KARNATAKA MONEY LENDERS (AMENDMENT) BILL, 1976.

Motion to Consider

SRI K. H. RANGANATH (Mininister for Co-operation).—I move:

"That the Karnataka Money Lenders (Amendment) Bill, 1976 be taken into consideration."

MADAM SPEAKER.—Motion moved:

"That the Karnataka Money Lenders (Amendment) Bill, 1976 be taken into consideration."

† SRI K. H. RANGANATH.—This is a very small measure. We have the Money Lenders Act which regulates the transaction of money Lending business. Under Section 5, no transaction can be done unless he holds a licence, and under Section 11, a little bit of laxity is there and the discretionary power is given to the Court. During the suits, if the plaintiff were to make an application to the Court that he would obtain a licence and produce it, the Court had, as it is, powers to give him time to get the licence. Now under the amending Bill before the House that power of staying the proceedings permitting him to take the licence is taken away. Further, an other clause, *viz.*, Section 15 is introduced. Under the present Act, the Assistant Registrar who will be in charge of the area issued the license and there the job ends and he has no other powers under the Act either to check or to cease the documents or if any mal-practices are going on to take any action against the money lenders. Therefore,

this new clause 15 is introduced and under that we will have all powers to check, even to cease the documents and all that. To clause 8, I am thinking of bringing in some improvemat to the existing clause because this applies to the pending suits and the execution proceedings also I personally feel that in respect of decres obtained and under execution if this is applied probably it may not be good in the interest of justice. So, I am thinking of bringing in a suitable amendment to clause 8. Two Sections are most important, *i.e*, in Section 11 I am deleting sub-clauses (2) (3) and (4) and in Section (5) I am making a very small amendment, which is not of much consequence Section 15 is also one of the important provisions, *viz*., giving powers to the officer in-charge of the administration of the Bill.

With these few remarks, I commend the Bill for the acceptance of this august House.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷಣೀಯರವರೇ, ಕರ್ನಾಟಕ ಮನಿ ಲೆಂಡರ್ಸ್ ಅಮೆಂಡ್‌ಮೆಂಟ್ ಬಿಲ್ (೧೯೭೨)ನ್ನು ಚರ್ಚೆಗೆ ತೆಗೆದುಕೊಂಡಾಗ ನಾನು ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ಕಾಲದಿಂದಲೂ ಬಡ ಜನರು ಯಾವುದರಿಂದ ಮತ್ತು ಯಾರಿಂದ ತೊಂದರೆಗೊಳಗಾಗುತ್ತಿದ್ದರೋ ಅಂಥವರನ್ನು ಒಂದು ಹಿಡಿತಕ್ಕೆ ತೆಗೆದುಕೊಂಡು ಬರಬೇಕು, ಬಡವರ ಬಗ್ಗೆ ಸಾಕಷ್ಟು ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಈ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ತಿದ್ದುಪಡಿ ನಿರ್ವಿವಾದವಾದುದು ಹಣವನ್ನು ಸಾಲ ಕೊಟ್ಟು ಬಡ ಜನರ ಮನೆಗಳನ್ನು ಎಷ್ಟೋ ಜನ ಹಾಳು ಮಾಡಿದ್ದಾರೆ. ಇದರಿಂದ ಹೆಚ್ಚಿನ ಜನರು ತೊಂದರೆಗೆ ಸಿಕ್ಕಿಕೊಂಡಿದ್ದಾರೆ. ಬಡ್ಡಿಗೆ ಬಡ್ಡಿ ಹಾಕಿ ಎಷ್ಟೋ ಜನರ ಆಸ್ತಿಪಾಸ್ತಿಗಳನ್ನ ಲಪಟಾಯಿಸಿರುವ ತಕ್ಕ ಅನೇಕ ನಿದರ್ಶನಗಳು ಇವೆ. ಈ ತಿದ್ದುಪಡಿಯನ್ನು ಸ್ವಲ್ಪ ದೂರದೃಷ್ಟಿಯಿಂದ ನೋಡಿದರೆ, ಒಂದಾನೊಂದು ಕಾಲದಲ್ಲಿ ಗ್ರಾಮಾಣ ಪ್ರದೇಶಗಳಲ್ಲಿ ಮತ್ತು ಬೇರೆ ಕಡೆಗಳಲ್ಲಿಯೂ ಸಾಲ ಹುಟ್ಟದೆ ಇದ್ದಂಥ ಜನಗಳಿಗೆ ಸಾಲ ಸಿಕ್ಕತಕ್ಕ ಒಂದು ವ್ಯವಸ್ಥೆ ಬಡ್ಡಿ ಕೊಡತಕ್ಕವರ ಕೈಗೆ ಹೋಗುತ್ತಿತ್ತು. ಅವರು ಸಾಲ ಕೊಡತಕ್ಕ ರೀತಿ ಸರಿಯೇ, ಅದನ್ನು ತಪ್ಪಿಸಬೇಕು ಎನ್ನುವ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಒಂದು ಗ್ಯಾಪ್ ಏನು ಇತ್ತೋ ಅದನ್ನು ಮನಿ ಲೆಂಡರ್ಸ್ ಒದಗಿಸಿಕೊಡುತ್ತಿದ್ದರು. ಈ ರಾಷ್ಟ್ರದ ನಾನಾ ಭಾಗಗಳಲ್ಲಿ ನಾಡಕೋಟಿಗಳು, ಚೆಟ್ಟಿಯಾರ್ಸ್, ಮಾರ್ವಾಡೀಸ್ ಮತ್ತು ಇತರರು ಹಣವನ್ನು ಕೊಡತಕ್ಕಂಥಾದ್ದು ಪುರಾತನ ಕಾಲದಿಂದಲೂ ಬಂದಿತ್ತು. ಅವರ ಮೇಲಿರತಕ್ಕ ದೊಡ್ಡ ಆರೋಪ ಏನೆಂದರೆ ಅವರು ಜನರಿಗೆ ಸಿಕ್ಕಾಪಟ್ಟೆ ಬಡ್ಡಿಯನ್ನು ಹಾಕುತ್ತಿದ್ದರು. ಇದು ಮೊದಲನೆಯದು.

ಮತ್ತು ಇದರಲ್ಲಿ ಯಾವ ವಿಧವಾದಂಥಾ ಕನಿಕರವಾಗಲಿ ಇಲ್ಲದೆ ವ್ಯವಹಾರ ದೃಷ್ಟಿಯಿಂದ ಬಡವರ ಶೋಷಣೆ ಆಗುತ್ತಿತ್ತು. ಸರ್ಕಾರ ಇದರ ಬಗ್ಗೆ ಅನೇಕ ವರ್ಷಗಳಿಂದ ಒಂದು ಅಲ್ಟರ್‌ನೇಟೀವ್ ಅರೇಂಜ್‌ಮೆಂಟ್ಸ್ ಮಾಡಬೇಕು ಇದ್ದುದರಿಂದ ಇದು ಸ್ವಲ್ಪ ವಿಫಲವಾಗಿತ್ತು. ಈಗ ಬ್ಯಾಂಕ್ ನಾಷನಲೈಸ್ ಆದ ಮೇಲೆ ಮತ್ತು ಕೋ ಆಪರೇಟೀವ್ ಸೆಕ್ಟಾರ್ಸ್‌ನಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಮತ್ತು ಪಟ್ಟಣಗಳಲ್ಲಿ ಅವರಿಗೆ ಸ್ವಲ್ಪ ಸಾಲ ಒದಗಿಸುವ ವ್ಯವಸ್ಥೆಯಾಗಿದೆ. ಆದರೆ ನನ್ನ ದೃಷ್ಟಿಯಲ್ಲಿ ನೋಡಿದರೆ ಈಗ ಸಾಲ ಕೊಡುವ ವ್ಯವಸ್ಥೆ ಸ್ವಲ್ಪ ಉತ್ತಮವಾಗಿದ್ದರೂ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ, ಇದನ್ನು ಸಮರ್ಪಕವಾದ ರೀತಿಯಲ್ಲಿ ಬಗೆಹರಿಸಬೇಕು. ಮನಿ ಲೆಂಡರ್ಸ್ ಅನ್ನು ಮಟ್ಟ ಹಾಕುವ ಕಾಲದಲ್ಲಿ ಇದನ್ನು ಇನ್ನೂ ಸ್ವಲ್ಪ ಉತ್ತಮಗೊಳಿಸಬೇಕಾಗುತ್ತದೆ. ಏಕೆಂದರೆ ಯಾರಿಗೆ ನಿಜವಾಗಿ ಸಾಲ ಸಿಗಬೇಕೋ ಅವರಿಗೆ ಸಿಕ್ಕುವುದಕ್ಕೆ ಇನ್ನೂ ಹೆಚ್ಚು ತೊಡಕು ಇದ್ದೇ ಇದೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಬಡವರಿಗೆ ಸಾಲ ಸುಲಭೋಪಾತಿಯಲ್ಲಿ ಸಿಗುವಂಥಾ ಒಂದು ವ್ಯವಸ್ಥೆ ಮಾಡಬೇಕು. ಮತ್ತು ಈಗ ಕೋಆಪರೇಟೀವ್ ಸೊಸೈಟಿ ಮುಖಾಂತರ ಸಾಲ ಸಿಗುವಂಥಾ ವ್ಯವಸ್ಥೆ ಏನು ಮಾಡಿದ್ದೀರೋ ಅದು ಇನ್ನೂ ಸಮರ್ಪಕವಾಗಿಲ್ಲ. ಏತಕ್ಕೆಂದರೆ ಈ ಕೋಆಪರೇಟೀವ್ ಸೊಸೈಟಿಗಳಲ್ಲಿ ಮೊದಲೇ ದುಡ್ಡು

ಇರುವುದಿಲ್ಲ. ದುಡ್ಡು ಇದ್ದರೆ ಸಾಲ ತೆಗೆದುಕೊಳ್ಳುವಂಥಾ ವ್ಯವಸೆ ಯೂ ಕಡಿಮೆಯಾಗಿದೆ. ಆದುದರಿಂದ ಈ ಕೋಆಪರೇಟೀವ್ ಸೊಸೈಟಿಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಸಮರ್ಪಕವಾಗಿ ನಡೆಸ ಬೇಕಾದ್ದು ಅಗತ್ಯ. ನ್ಯಾಷನಲೈಸೇಷನ್ ಬ್ಯಾಂಕ್ಸ್‌ನಲ್ಲಿ ಪಟ್ಟಣದ ಪ್ರದೇಶದಲ್ಲಿರುವ ಬಡವರಿಗೆ ಸ್ವಲ್ಪ ಮಟ್ಟಿಗೆ ಸಾಲ ಸಿಗುವಂಥಾ ವ್ಯವಸ್ಥೆ ಇದೆ. ಆದರೆ ಎಷ್ಟು ಬೇಕೋ ಅಷ್ಟು ಸಿಕ್ಕುತ್ತಾ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಸಾಲದ ವ್ಯವಸ್ಥೆ ಬಹಳ ಅಸಮರ್ಪಕವಾಗಿದೆ. ಮನಿ ಲೆಂಡರ್ಸ್ ಅನ್ನು ಮಟ್ಟ ಹಾಕುವಂಥಾ ಕಾಲದಲ್ಲಿ ಈ ಬಗ್ಗೆ ಬಹಳ ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಇಂತಹ ಪ್ರಗತಿಪೂರಕವಾದ ವಿಚಾರಗಳನ್ನು ದೇಶದಲ್ಲಿ ಜಾರಿಗೆ ತರುವಾಗ ಅದರಲ್ಲಿ ಕಂಡುಬರುವ ಲೋಪ ದೋಷಗಳನ್ನು ತಿದ್ದದೇ ಹೋದರೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ ಅನ್ನುವುದು ಸರ್ಕಾರಕ್ಕೆ ಗೊತ್ತಿರಬೇಕು. ಇದನ್ನು ಒಂದು ವ್ಯವಸ್ಥಿತವಾರೀತಿಯಲ್ಲಿ ಬಗೆಹರಿಸದೇ ಹೋದರೆ ಜನಗಳು ಪೇಚಾಟಕ್ಕೆ ಸಿಕ್ಕಿಕೊಳ್ಳುವಂಥಾ ಸಂಭವ ಬರುತ್ತದೆ ಎನ್ನುವ ಶಂಕೆ ನನಗೆ ಇದೆ. ಆದುದರಿಂದ ಈ ಸಂದರ್ಭದಲ್ಲಿ ಸರ್ಕಾರ ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳದೇ ಹೋದರೆ ಜನ ಬಹಳ ನೊಂದುಕೊಳ್ಳುತ್ತಾರೆ ಎಂದು ಹೇಳಂತ್ತೇನೆ.

ಇನ್ನು ಈಗ ಕೊಡತಕ್ಕಂಥಾ ಬಡ್ಡಿ ದರ ನೋಡಿದರೆ ಬಹಳ ಜಾಸ್ತಿಯಾಗಿದೆ. ಒಂದಾನೊಂದು ಕಾಲದಲ್ಲಿ ಬಡ್ಡಿ ದರ ಶೇಕಡ ೧೮ ರಿಂದ ೨೪ ರವರೆಗೆ ಇದ್ದುದಕ್ಕೆ ಅದನ್ನು ಮಾರ್ವಾಡಿ ಬಡ್ಡಿ ಎಂದು ಹೇಳಂತ್ತಿದ್ದರು. ಈಗ ನ್ಯಾಷನಲೌಸೇಷನ್ ಬ್ಯಾಂಕ್ಸ್‌ನಲ್ಲಿ ಸಾಧಾರಣವಾಗಿ ೧೮ ರಿಂದ ೨೧ ರವರೆಗೆ ಇದೆ. ಯಾವನಾದರೂ ಒಬ್ಬ ಮನುಷ್ಯ ತನ್ನ ವ್ಯಾಪಾರಕ್ಕಾಗಲಿ ಅಥವಾ ಒಂದು ಕೈಗಾರಿಕೆಗಾಗಲಿ ೧೮ ಪರ್ಸೆಂಟ್ ನಿಂದಲೋ ೨೧ ಪರ್ಸೆಂಟ್‌ನಿಂದಲೋ ಬಡ್ಡಿಗೆ ಹಣ ತೆಗೆದುಕೊಂಡರೆ ೫ ವರ್ಷದಲ್ಲೇ ಅವನ ಆಸಲ್ಲೆಲ್ಲಾ ಬಂದುಬಿಡುತ್ತದೆ. ಇಷ್ಟೊಂದು ಬಡ್ಡಿ ಕೊಟ್ಟರೆ ಅವನು ಯಾವ ರೀತಿಯಿಂದಲೂ ಕೂಡ ಉದ್ಧಾರವಾಗುವುದಿಲ್ಲ. ಆದುದರಿಂದ ಈ ಬಡ್ಡಿ ದರವನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಈ ಬಗ್ಗೆ ಎರಡು ಮುಖ್ಯವಾದ ಅಂಶಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಮೊದಲನೆಯದಾಗಿ ಈ ತಿದ್ದುಪಡಿಯಲ್ಲಿ ಅಧಿಕಾರಿಗಳಿಗೆ ಎನ್‌ಫೋರ್ಸ್ ಮಾಡುವ ಅಧಿಕಾರವನ್ನು ಕೊಡುವುದಕ್ಕೆ ಇದನ್ನು ತೆಗೆದುಕೊಂಡು ಬಂದಿದ್ದೀರಿ. ಮತ್ತು ಈ ಕಾಯಿದೆಯಿಂದ ಮೊದಲು ಏನು ಒಂದು ಶಿಕ್ಷೆ ಇತ್ತೋ ಅದನ್ನು ಡಬ್ಬಲ್ ಮಾಡುವುದಕ್ಕೆ ಇದನ್ನು ತೆಗೆದುಕೊಂಡು ಬಂದಿದ್ದೀರಿ. ಮತ್ತು ಕೆಲವು ಕಲಂಗಳನ್ನು ಒಮಿಟ್ ಮಾಡಿದ್ದೀರಿ. ಈ ಹಿಂದೆ ಏನು ಇತ್ತು ಎಂದರೆ ಮನಿಲೆಂಡರ್ಸ್ ಏನಾದರೂ ಕೋರ್ಟಿಗೆ ಹೋದಾಗ ಲೈಸನ್ಸ್ ತೆಗೆದುಕೊಳ್ಳದೇ ಹೋಗಿದ್ದರೆ ಅವನಿಗೆ ೨ ತಿಂಗಳು ಕಾಲಾವಕಾಶ ಕೊಟ್ಟು ಮನಿಲೆಂಡರ್ಸ್ ಲೈಸನ್ಸ್ ತೆಗೆದುಕೊಂಡು ಬಾ ಎಂದು ಹೇಳಿ ನಂತರ ಹೀರಂಗ್ ಇಟ್ಟು ಆ ಕೇಸುಗಳನ್ನು ಬಗೆಹರಿಸುತ್ತಿದ್ದರು. ಈಗ ಅದು ಬೇಡ ಎಂದು ತೆಗೆದುಹಾಕಿದ್ದೀರಿ. ಈಗ ಮನಿ ಲೆಂಡರ್ ಲೈಸನ್ಸ್ ಬಗ್ಗೆ ಸ್ವಲ್ಪ ಬಿಗಿ ಮಾಡಿದ್ದೀರಿ. ಆದುದರಿಂದ ಅವನು ಈಗ ಯಾವರೀತಿಯಿಂದಲೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈ ಮನಿಲೆಂಡರ್ಸ್ ಬಗ್ಗೆ ಇನ್ನೂ ಬಿಗಿ ಮಾಡಿರುವುದರಿಂದ ಇದರಲ್ಲಿ ನಾನು ವಿರೋಧಿಸಬೇಕಾದಂಥಾದ್ದೇನೂ ಕಾಣಲಿಲ್ಲ ಆದರೆ ಆನೇಕರಿಗೆ ಅಂದರೆ ಸಾಲ ಕೊಟ್ಟವಂಥಾವರಿಗೆ ಲೈಸನ್ಸ್ ತೆಗೆದುಕೊಳ್ಳದೇ ಹೋಗದೇ ಇದ್ದವದಂಥಾವರಿಗೆ ಹಣ ಹೋಯಿತಲ್ಲಾ ಎಂದು ವ್ಯಥೆಯಾಗಿದೆ. ನಾವು ಕೊಟ್ಟ ದುಡ್ಡು ಹೋಯಿತಲ್ಲಾ ಒಂದು ಅವರು ವ್ಯಥೆಪಡುತ್ತಾ ಇದ್ದಾರೆ. ಇದರ ಬಗ್ಗೆ ನಾನು ಏನಾದರೂ ಹೇಳಿದರೆ ಇಂತಹ ಪ್ರಗತಿಪೂರಕವಾದ ಕಾಯಿದೆಗಳನ್ನು ಜಾರಿಗೆ ತರುವಾಗ ಜನಗಳಿಗೆ ಉಪಯೋಗಕವಾದಂಥಾ ಕಾನೂನುಗಳನ್ನು ಮಾಡುವಾಗ ಸ್ವಲ್ಪ ತೊಂದರೆ ಬಂದೇ ಬರುತ್ತದೆ ಎಂದು ಹೇಳುತ್ತಾರೆ ಆದುದರಿಂದ ನಾನು ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೆ. ಈಗ ಅವರಿಗೆ ಎಲ್ಲೂ ಸಾಲ ಸಿಗುವ ಹಾಗಿಲ್ಲ ಏಕೆಂದರೆ ಮನಿ ಲೆಂಡರ್ಸ್ ನಿರ್ನಾಮವಾಗುವ ಕಾಲ ಹತ್ತಿರ ಬಂದಿದೆ. ಆದುದರಿಂದ ಈ ಬಡವರಿಗೆ ಸಾಲಸೋಲಗಳು ಸುಲಭವಾಗಿ ಸಿಗುವ ರೀತಿಯಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ಒಂದು ಅಲ್ಟರ್‌ನೇಟೀವ್ ಅರೆಂಜ್‌ಮೆಂಟ್ಸ್ ಮಾಡಿ ಅವರಿಗೆ ಉಪಕಾರ ಮಾಡಿ. ಈ ಪ್ರಗತಿಪೂರಕವಾದ ಕಾಯಿದೆಯನ್ನು ಜಾರಿಗೆ ತರುವಾಗ ಇದರಲ್ಲಿರ ತಕ್ಕಂಥಾ ತೊಂದರೆಗಳನ್ನೂ ಕೂಡ ಬಗೆಹರಿಸುವುದಕ್ಕೆ ಅಧಿಕಾರವನ್ನು ತಮ್ಮಲ್ಲೇ ಇಟ್ಟುಕೊಂಡು ಹೆಚ್ಚಿಗೆ ಅವರುಗಳಿಗೆ ತೊಂದರೆಯಾಗದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳಂತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ಕೆಲವುಕಡೆ ಹೇಳಿದರು ಈಗ ಡೆಟ್ ರಿಲೀಫ್ ಬಿಲ್ ಮತ್ತು ಮನಿಲೆಂಡರ್ಸ್ ಆಕ್ಟ್ ಬಂದಿದೆ; ಮನೆಯಲ್ಲಿ ಯಾವುದಾದರೂ ಒಂದು ಸಣ್ಣ ವುಟ್ಟ ಕೆಲಸ ಮಾಡಬೇಕಾದರೂ ಮದುವೆ ಮಗೈರೆ ಕೆಲಸಗಳು ಆಗಬೇಕಾದರೂ ಸಾಲಸೋಲಗಳು ಸಿಗದೆ ಈ ವ್ಯವಹಾರ ಗಳೇ ನಿಂತುಹೋಗಿದೆ ಎಂದು. ಯಾವನಾದರೂ ಮನುಷ್ಯನಿಗೆ ಕಷ್ಟಕಾಲ ಬಂದಾಗ ಯಾವನಾದರೂ ಸಾಲ ಕೊಟ್ಟರೆ ಅದಕ್ಕೂ ಕೂಡ ಈ ಮನಿಲೆಂಡರ್ ಲೈಸನ್ಸ್ ಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಇದರಿಂದ ಯಾರೂ ಸಾಲ ಕೊಡುವುದಿಲ್ಲ. ಕಾರಣ 'ಅವನ ಮೇಲೆ ಏನಾದರೂ ಕೋರ್ಟಿಗೆ ಹೋಗ ಬೇಕಾದರೆ ಅವನ ಹತ್ತಿರ ಲೈಸನ್ಸೇ ಇಲ್ಲದೇ ಇರುವುದರಿಂದ ಹಣ ಕೊಟ ರೂ ಏನೂ ಪ್ರಯೋಜನವಾಗು ವುದಿಲ್ಲ. ಆದುದರಿಂದ ಇದು ದುರುಪಯೋಗವಾಗದಂತೆ ಮಾನವೀಯತೆ ದೃಷಿ ಯಿಂದ ನೋಡಿಕೊಳ್ಳ ಬೇಕು ಎಂದು ಹೇಳುತ್ತೇನೆ. ಯಾವನಾದರೂ ಮನುಷ್ಯ ತನ್ನ ಕಷ್ಟಕಾಲದಲ್ಲಿ ಮನಿಲೆಂಡರ್ಸ್ ಅನ್ನು ಗೋಗರೆದು ಸಾಲ ತೆಗೆದುಕೊಂಡಾಗ, ಅದನ್ನು ವಾಪಸ್ಸು ಕೊಡುವಾಗ ನಿನ್ನ ಹತ್ತಿರ ಮನಿಲೆಂಡರ್ಸ್ ಲೈಸನ್ ಇಲ್ಲ ಆದುದರಿಂದ ನಿನಗೇನೂ ಕೊಡಬೇಕಾದ್ದಿಲ್ಲ ಎಂದು ಸಬೂಬು ಹೇಳುತ್ತಿದ್ದಾರೆ. ಇದನ್ನು ಈ ರೀತಿಯಾಗಿ ದುರುಪಯೋಗ ಪಡಿಸಿಕೊಳ್ಳುವುದಾದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಇದನ್ನು ದುರುಪಯೋಗ ಪಡಿಸಿಕೊಳ್ಳದೇ ಇದ್ದ ಹಾಗೆ ನೋಡಿಕೊಳ್ಳುತ್ತೇನೆ ಅನ್ನುವ ಆಶ್ವಾಸನೆ ಮಾನ್ಯ ಮಂತ್ರಿ ಗಳು ಕೊಡುತ್ತಾರೆಂದು ನಾನು ನಂಬಿದ್ದೇನೆ. ಯಾರಿಗಾದರೂ ಆಗಲಿ ಮನೆಯಲ್ಲಿ ಮದುವೆ ಮಗೈರೆ ಸಣ್ಣಪುಟ್ಟ ಕೆಲಸಗಳು ನಡೆಯಬೇಕಾದರೆ ಒಂದು ಸಾವಿರ ರೂಪಾಯಿ ಬೇಕಾಗುತ್ತದೆ. ಇಂಥಾ ಕಷ್ಟಕಾಲ ಬಂದಾಗ ಮನಿಲೆಂಡರ್ಸ್ ಏನಾದರೂ ಸಾಲ ಕೊಟ್ಟರೆ ಆ ಸಾಲ ವಾಪಸ್ ಏನೂ ಕೊಡಬೇಕಾದಿಲ್ಲ ಎಂದರೆ ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಕಾಯಿದೆಯಿಂದ ಮುಂದೆ ಬರತಕ್ಕಂಥಾ ಲೋಪಗಳನ್ನು ತಿದ್ದಿಕೊಂಡು, ಇದು ದುರುಪಯೋಗವಾಗದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

2-30 P. M.

† ಶ್ರೀ ಎಸ್. ಎಂ. ಶೀರ್ಷಳಿಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಣಿಯಂವರೇ, ಈ ದೇಶದಲ್ಲಿದ್ದಂತಹ ಶೈಲಾಕ್ಸ್‌ನ್ನು ಹತ್ತಿಕ್ಕುವುದಕ್ಕಾಗಿ ಬಂದಂಥ ಈ ಶಾಸನಕ್ಕೆ ನನ್ನ ಸಂಪೂರ್ಣ ವಾದಂಥ ಬೆಂಬಲವನ್ನು ವ್ಯಕ್ತಪಡಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತಿನ ವರೆಗೆ ನಾನು ಮನಿಲೆಂಡರ್ಸ್ ಲೈಸನ್ಸ್‌ನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುಕ್ಕಾಗಿರಲಿಲ್ಲ. ಸೆಕ್ಷನ್ ೧೧ರಲ್ಲಿ ಹಾಕಿರತಕ್ಕಂಥ ಕೆಲವು ಕಲಂಗಳ ಆಧಾರದ ಮೇಲೆ ಕೋರ್ಟಿನಲ್ಲ ನ್ಯಾಯಾಧೀಶರು ಲೈಸೆನ್ಸ್ ತೆಗೆದು ಕೊಳ್ಳಲು ಇಲ್ಲಿಯವರೆಗೆ ಸಮಯ ಕೊಡುತ್ತಿದ್ದರು. ಸಾಮಾನ್ಯವಾಗಿ ಪ್ರತಿವಾದಿ ಪರವಾಗಿ ಹಾಜರಾಗುವ ವಕೀಲರು ಸಾಲ ಕೊಟ್ಟವರ ಹತ್ತಿರ ಲೈಸನ್ಸ್ ಇದೆಯೇ ಎಂಬತಕ್ಕಂಥ ತಕರಾರನ್ನು ಎತ್ತುತ್ತಿದರು. ಲೈಸನ್ಸ್ ಇಲ್ಲ ಎಂದು ತಿಳಿದುಬಂದರೆ, ಅದವ್ನು ತೆಗೆದುಕೊಳ್ಳಲು ಸಮಂಯಾವಕಾಶ ಕೊಡುಂತಹ ಒಂದು ರಿವಾಜು ಇಲ್ಲಿಯಂವರೆಗೆ ನಡೆದುಕೊಂಡು ಬಂದಿತ್ತು. ಲೈಸನ್ಸ್ ತೆಗೆದುಕೊಂಡ ಮೇಲೆ ಡಿಕ್ರಿ ಸಿಗುತ್ತಿತ್ತು. ಈ ಒಂದು ಅನಿಶ್ಚಿತ ಪರಿಸ್ಥಿತಿಗೆ ಇನ್ನು ಮುಂದೆ ಈ ಒಂದು ತಿದ್ದುಪಡಿ ಮಸೂದೆ ಪ್ರಕಾರ ವಿರಾಮ ಹಾಕಿದಂತೆ ಆಗಿದೆ. ಜೊತೆಗೆ ನಮ್ಮ ಸರ್ಕಾರದ ನೀತಿಯಂತೆ ಈ ಖಾಸಗೀ ಲೇವಾದೇವಿ ವ್ಯವಹಾರವನ್ನು ನಿಲ್ಲಿಸು ವುದಕ್ಕಾಗಿ ಈ ಒಂದು ಶಾಸನವನ್ನು ತೆಗೆದುಂಕೊಂಡು ಬಂದಿದ್ದಾರೆಂದು ನಾನು ತಿಳಿದುಕೊಂಡಿದೆ ನೆ. ಖಾಸಗಿಯಾಗಿ ವ್ಯವಹಾರ ಮಾಡುವವರ ಪೈಕಿ ಎರಡು ವರ್ಗದ ಜನರಿದ್ದಾರೆ. ಊರಿನಲ್ಲಿ ಸಮಾಜ ದ್ರೋಹಿಗಳು ಎಂದು ಯಾರು ಇರುತ್ತಾರೆ, ಅಂತವರು ಇಂಬಳಗಳು ಮನುಷ್ಯನ ರಕ್ತವನ್ನು ಹೀರಿ ಕೆಳಗೆ ಬೀಳುವಂತೆ, ಬಡವರ ಶೋಷಣೆ ಮಾಡುವವರದ್ದು ಒಂದು ವರ್ಗವಾದರೆ, ಕಷ್ಟಕಾಲದಲ್ಲಿ ನೆರವಿಗೆ ಬರುವಂತಹ ಜನರು ಕೆಲವರಿರುತ್ತಾರೆ. ಮಾನ್ಯ ಶಾಮಣ್ಣನವರು ಹೇಳಿದಂತೆ ಮುಂದೆ ಕಾಲದಲ್ಲಿ ಇಲ್ಲವೇ ಯಾರಾದರು ಸತ್ತಾಗ, ಅದರ ಖರ್ಚಿಗೆ ಸಾಲ ಕೊಟ್ಟು ಕಡಿಮೆ ದರದಲ್ಲಿ ಬಡ್ಡಿ ತೆಗೆದುಕೊಳ್ಳುವಂತಹವರು ಕೆಲವರಿರುತ್ತಾರೆ. ಇಲ್ಲಿಯವರೆಗೆ ಸೆಕ್ಷನ್ ೧೧ರ ಪ್ರಕಾರ ಕೋರ್ಟಿನಲ್ಲಿ ದಾವಾ ಹಾಕಿದಾಗ ಲೈಸನ್ಸ್ ತೆಗೆದುಕೊಳ್ಳಲು ಅವಕಾಶವಿತ್ತು. ಈ ಒಂದು ಅವಕಾಶವಿದೆ ಎಂಬ ಕಾರಣದಿಂದ ಲೈಸನ್ಸ್ ಇದ್ದವರೂ ಸಹ, ತಮ್ಮ ಲೈಸನ್ಸಿನ ವಾಯಿದೆ ಮುಗಿದಿದ್ದರೂ ಸಹ ರಿನ್ಯೂವಲ್ ಮಾಡಿಸದೆ ಸುಮ್ಮನಿದ್ದವರು ಕೆಲವರಿದ್ದಾರೆ. ಇಂತಹವರು ನ್ಯಾಯವಾದ ಬಡ್ಡಿಯನ್ನು ತೆಗೆದುಕೊಂಡು ೫-೧೦ ಸಾವಿರ ರೂಪಾಯಿ ಗಳವರೆಗೆ ವ್ಯವಹಾರ ಮಾಡುತ್ತಿದ್ದರೆ, ಇನ್ನು ಮುಂದೆ ನೇರವಾಗಿ ಇದರಿಂದ ಕೊಡಲಿಪೆಟ್ಟು ಬೀಳ

ಬಹುದು. ಆದಕಾರಣ ನನ್ನ ಮನವಿ ಏನೆಂದರೆ, ಇವೊತ್ತಿನವರೆಗೆ ಯಾರು ಯಾರು ಸಾಲ ಕೊಟ್ಟಿರು ತ್ತಾರೋ, ಅಂತಹವರು ಸೆಕ್ಷನ್ ೧೧ರ ಪ್ರಕಾರ ಲೈಸನ್ಸ್ ತೆಗೆದುಕೊಂಡು ತಮ್ಮ ವ್ಯವಹಾರವನ್ನು ಮುಂದುವರೆಸಬಹುದು, ಆದರೆ ಇನ್ನು ಮುಂದೆ ಲೈಸನ್ಸ್ ತೆಗೆದುಕೊಂಡೇ ಇಂತಹ ವ್ಯವಹಾರ ಮಾಡ ಬೇಕು ಎನ್ನುತಕ್ಕಂಥ ಒಂದು ಕ್ಲಾಸನ್ನು ಹಾಕಿದರೆ ಒಳ್ಳೆಯದಾಗಬಹುದೆಂದು ಹೇಳುತ್ತೇನೆ ಇದರಿಂದ ಸೆಕ್ಷನ್ ೧೧ರ ನೆರಳಿನಲ್ಲಿ ವಾಸ ಮಾಡುತ್ತಿದ್ದವರಿಗೆ ಅನುಕೂಲವಾಗುತ್ತದೆ. ಈಗ ಸೆಕ್ಷನ್ ೫ ರಲ್ಲಿ ಮನಿ-ಲೆಂಡರ್ಸ್‌ಗೆ ಮ್ಯಾಂಡೇಟರಿ ಕ್ಲಾಸ್ ಒಂದನ್ನು ಹಾಕಿದ್ದೀರಿ ಅದರ ಪ್ರಕಾರ ಈ ವ್ಯವಹಾರ ಮಾಡುವವರು ಲೈಸನ್ಸ್ ತೆಗೆದುಕೊಳ್ಳಲೇ ಬೇಕಾಗುತ್ತದೆ. ಇಲ್ಲಿಯವರೆಗೆ ಸೆಕ್ಷನ್ ೧೧ರ ಪ್ರಕಾರ ಲೈಸನ್ಸ್ ತೆಗೆದು ಕೊಳ್ಳಲಂ ಅವಕಾಶವಿತ್ತು. ಕೆಲವರಿಗೆ ಕೋರ್ಟಿಗೆ ಹೋಗಿ ಅಭ್ಯಾಸವಿಲ್ಲ. ನ್ಯಾಯವಾಗಿ ವ್ಯವಹಾರ ಮಾಡುತ್ತಿದ್ದ ಇಂತಹವರಿಗೆ ಇನ್ನು ಮುಂದೆ ಇದರಿಂದ ತೊಂದರೆಯಾಗಬಹುದು. ಆದಕಾರಣ ಈ ಶಾಸನ ಜಾರಿಗೆ ಬರುವುದರೊಳಗಾಗಿ, ಮನಿಲೆಂಡರ್ಸ್ ಯಾರು ಯಾರು ಇದ್ದಾರೆ, ಅವರೆಲ್ಲಾ ಇಂತಿಷ್ಟೇ ದಿವಸಗಳಲ್ಲಿ ಕಡ್ಡಾಯವಾಗಿ ಲೈಸನ್ಸ್ ತೆಗೆದುಕೊಳ್ಳಬೇಕು ಎಂಬುದಾಗಿ ಒಂದು ಆರ್ಡಿನೆನ್ಸ್ ಹೊರಡಿ ಸಿದರೆ, ಎಲ್ಲ ವರ್ಗದ ಜನರಿಗೂ ಅನುಕೂಲವಾಗಬಹುದೆಂದು ನನ್ನ ವಾದ. ಸೆಕ್ಷನ್ ೫ರ ಪ್ರಕಾರ ಲೈಸನ್ಸ್ ಇಲ್ಲದೆ ಈ ವ್ಯವಹಾರ ಮಾಡುವುದು ಅಪರಾಧವಾಗುತ್ತದೆಂದು ತಾವು ತಮ್ಮ ಉತ್ತರದಲ್ಲಿ ಹೇಳಬಹುದು ಆದರೆ ಇಲ್ಲಿಯವರೆಗೆ ಕ್ಲಾಸ್-೧೧ರ ಪ್ರಕಾರ ಲೈಸನ್ಸ್ ತೆಗೆದುಕೊಳ್ಳಲು ನೆರವು ಸಿಗುತ್ತಿತ್ತು. ಈ ಕಾರಣ ದಿಂದ ಈ ಶಾಸನ ಜಾರಿಗೆ ಬಂದಮೇಲೆ ಸಂಬಂಧಪಟ್ಟವರು ಹೈಕೋರ್ಟಿಗೆ ಹೋಗಿ ಪ್ರಶ್ನೆ ಮಾಡಬಹು ದೆಂಬ ಸಂಶಯ ನನಗಿದೆ. ಇದಕ್ಕೆ ಯಾವ ರೀತಿ ಪರಿಹಾರ ಕಂಡುಹಿಡಿಯುತ್ತೀರಿ ಎಂಬುದು ತಮಗೇ ಬಿಟ್ಟಿದ್ದು. ಈ ಬಿಲ್‌ನ್ನು ನಾವು ಪಾಸ್ ಮಾಡಿದ ಮೇಲೆ ಯಾರಾದರು ಹೈಕೋರ್ಟಿಗೆ ಹೋದರೆ ಅದರ ಪರಿಣಾಮ ಏನಾಗುತ್ತದೆಂಬುದನ್ನು ತಾವು ಯೋಚನೆ ಮಾಡಿ ನೋಡಬೇಕು. ಈ ಮೊದಲು ನಾವು ಡೆಟ್ ರಿಲೀಫ್ ಆಕ್ಟ್‌ನ್ನು ತೆಗೆದುಕೊಂಡು ಬಂದೆವು, ಯಾರಿಗೆ ವರ್ಷಕ್ಕೆ ೨೪೦೦ ರೂಪಾಯಿಗಳ ಆದಾಯ ವಿದೆಯೋ, ಅಂತಹವರು ತೆಗೆದುಕೊಂಡಂತಹ ಸಾಲವನ್ನು ವಾಪಸ್ ಕೊಡಬೇಕಾಗಿಲ್ಲ ಎಂದು ಶಾಸನ ಮಾಡಿದೆವು ಆದರೆ ಆ ಬಿಲ್ ಈಗ ಹೈಕೋರ್ಟಿನಲ್ಲಿ ಸ್ಟೇ ಆಗಿದೆ. ಆ ಒಂದು ಸ್ಟೇ ನೆರವಿನಿಂದ ತಮ್ಮ ವ್ಯವಹಾರವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದಕಾರಣ ಹೈಕೋರ್ಟಿನ ವ್ಯಾಪ್ತಿಗೆ ಈ ಬಿಲ್ ಬಾರದಂತೆ ಶಾಸನ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಇದೊಂದು ಪ್ರಗತಿಪರವಾದಂಥ ಶಾಸನವಾಗಿದೆ. ನಾವು ಸಮಾಜವಾದದ ಸಿದ್ಧಾಂತವನ್ನು ಹೇಳುವಾಗ ಖಾಸಗಿ ಲೇವಾದೇವಿಯನ್ನು ನಿರ್ನಾಮ ಮಾಡ ಬೇಕು.

ಶ್ರೀ ವಿ. ಎನ್. ಪಾಟೀಲ್.—ತಾವು ಮತ್ತೊಂದು ಕಡೆ ವೆಸ್ಟೆಡ್ ಇಂಟರೆಸ್ಟ್‌ಗೆ ರಿಯಾಯಿತಿ ಕೊಡ ಬೇಕೆಂದೂ ಸಹ ಕೇಳುತ್ತಿದ್ದೀರಿ, ಅದು ನ್ಯಾಯವೇ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ರಿಯಾಯಿತಿ ಕೇಳಲಿಲ್ಲ. ನಾನು ಹೇಳಿದ್ದನ್ನು ತಾವು ಪೂರ ಕೇಳಿದ್ದರೆ ಅರ್ಥವಾಗುತ್ತಿತ್ತು. ಇಂದು ಈ ಬಡ್ಡಿ ವ್ಯವಹಾರದಲ್ಲಿಯೇ ಜೀವನ ಮಾಡು ತ್ತಿರುವಂತಹ ಒಂದು ವರ್ಗವಿದೆ. ಇನ್ನೊಂದು ವರ್ಗ ಎಂದರೆ ವರ್ಷಕ್ಕೆ ಶೇಕಡಾ ೫ ಅಥವಾ ೧೦ ರೂಪಾಯಿಗಳಂತೆ ನ್ಯಾಯವಾದ ಬಡ್ಡಿ ತೆಗೆದುಕೊಂಡು ಕಷ್ಟ ಕಾಲದಲ್ಲಿ ಸಹಾಯ ಮಾಡುವಂತಹವರು ಇದ್ದಾರೆ. ಇಂತಹವರಿಗೆ ಸ್ವಲ್ಪ ಅನುಕಂಪ ತೋರಿಸಿ, ಅವರು ಲೈಸನ್ಸ್ ತೆಗೆದುಕೊಳ್ಳಲು ಸ್ವಲ್ಪ ಕಾಲಾವ ಕಾಶ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ಈ ಶಾಸನ ಹೈಕೋರ್ಟಿಗೆ ಹೋಗಿ ಸ್ಟೇ ಆಗದಂತೆ ಆಗಲೀ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ) —ಮಾನ್ಯ ಅಧ್ಯಕ್ಷಿಣಿಯವರೇ, ಈ ಮಸೂದೆಯನ್ನು ಸ್ವಾಗತ ಮಾಡುವವರಲ್ಲಿ ನಾನೂ ಒಬ್ಬ. ಏಕೆಂದರೆ, ನಮ್ಮ ಕರ್ನಾಟಕ ದೇಶದಲ್ಲಿರತಕ್ಕಂಥ ಮನಿ-ಲೆಂಡರ್ಸ್, ಏನಿದ್ದಾರೆ, ಅವರು ಮೈಸೂರಿನವರಲ್ಲ. ಅವರುಗಳು ಯಾವುದೋ ಊರಿನಿಂದ ಬಂದಿದ್ದಾರೆ. ಅವರು ಬರುವಾಗ ಒಂದು ಸಾವಿರ ರೂ.ಗಳನ್ನು ಶೇಕಡಾ ನಾಲ್ಕಾಣೆ ಬಡ್ಡಿ ದರದ ಮೇಲೆ ತೆಗೆದುಕೊಂಡು ಬಂದು, ಇಲ್ಲಿ ಹೆಚ್ಚು ವರಿ ಬಡ್ಡಿ ಮೇಲೆ ಸಾಲ ಕೊಟ್ಟು ಕೆಲವು ವರ್ಷಗಳಲ್ಲಿಯೇ ಲಕ್ಷಾಂತರ ರೂ.ಗಳನ್ನು ಸಂಪಾದನೆ ಮಾಡಿದ್ದಾರೆ. ಇದಕ್ಕೆ ಕೆಲವು ನಿದರ್ಶನಗಳನ್ನು ಹೇಳಬೇಕಾದರೆ, ಬೆಂಗಳೂರಿಗೆ ೨೨ ಮೈಲಿ ದೂರದಲ್ಲಿ ದೊಡ್ಡಬಳ್ಳಾಪುರ ಎಂಬ ಊರಿದೆ ಅಲ್ಲಿ ೧೫ ವರ್ಷಗಳ ಹಿಂದೆ ಮಾರ್ವಾಡಿಗಳಾಗಲೀ, ಗುಜರಾತಿಗಳಾಗಲೀ ಇರಲಿಲ್ಲ. ಅನಂತರ ಸ್ವಲ್ಪ ಜನ ಮಾರ್ವಾಡಿಗಳು ಅಲ್ಲಿಗೆ ಬಂದು ಈ ಒಂದು ವ್ಯವಹಾರವನ್ನು ಪ್ರಾರಂಭ

ಮಾಡಿ, ಇಂದು ಮೂರು ಅಂತಸ್ತಿನ ಮಹಡಿ ಮನೆಯನ್ನು ಕಟ್ಟಿಸಿಕೊಂಡು ಸುಖವಾಗಿದ್ದಾರೆ. ಈ ಒಂದು ತಿದ್ದುಪಡಿ ಮಸೂದೆ ಈ ಹಿಂದೆಯೇ ಬರಬೇಕಾಗಿತ್ತು. ಆ ರೀತಿ ಬಾರದೇ ಇದ್ದುದು ತಪ್ಪು ಎಂದು ಹೇಳುತ್ತೇನೆ ಆದರೆ ಇದರಲ್ಲಿ ಗಮನಿಸಬೇಕಾದ ಒಂದು ವಿಷಯವಿದೆ. ಏನೆಂದರೆ ಗಂಡ ಸತ್ತಮೇಲೆ ಹೆಂಗಸರು ತಮ್ಮ ಒಡವೆವಸ್ತುಗಳನ್ನು ಮಾರಿ, ಆದರಿಂದ ಬಂದ ಹಣವನ್ನು ಬ್ಯಾಂಕ್‌ಗಳಲ್ಲಿಟ್ಟರೆ ಕಡಿಮೆ ಬಡ್ಡಿ ಬರುತ್ತದೆಂದುಕೊಂಡು, ಹೆಚ್ಚಿನ ಬಡ್ಡಿ ಪಡೆದುಕೊಳ್ಳಲು ಆ ಹಣವನ್ನು ತಮಗೆ ನಂಬಿಕೆಯಿರುವವರ ಹತ್ತಿರ ಕೊಟ್ಟಿರುತ್ತಾರೆ ಇವರೇನೂ ಬಡ್ಡಿ ವ್ಯವಹಾರ ಮಾಡುವವರಲ್ಲ, ತಮ್ಮ ಒಡವೆಗಳನ್ನು ಮಾರಿ ಅವರಿಂದ ಬಂದ ಹಣವನ್ನು ತಮಗೆ ಯಾರಲ್ಲಿ ನಂಬಿಕೆ ಇರುತ್ತದೋ ಅಂತಹವರ ಬಳಿ ಇಟ್ಟು ಸ್ವಲ್ಪ ಬಡ್ಡಿ ತೆಗೆದುಕೊಳ್ಳುತ್ತಿರುತ್ತಾರೆ.

ಈ ಕಾನೂನು ಜಾರಿಗೆ ಬಂದಮೇಲೆ ಎಕ್ಸ್‌ಚೇಂಜ್ ಇಲಾಖೆಯವರಿಗೆ ಮಂತ್ರಿ, ಪೋಲೀಸ್ ಇಲಾಖೆಯವರಿಗೆ ಸಾಮಾ ತೆಗೆದುಕೊಂಡವರು ಇಂಥವರು ಸಾಲ ಕೊಟ್ಟಿದ್ದಾರೆ ಎಂದರೆ ಅವರ ಮನೆಗಳಿಗೆ ಪೋಲೀಸಿನವರು ಹೋಗುವುದು ತೊಂದರೆ ಕೊಡುವುದು ಎರಡು ಮೂರು ಸಾವಿರ ರೂಪಾಯಿಗಳ ಒಂದೆರಡು ಆರ್ಡಿಮ್ಯಾಂಡ್‌ಗಳು ಇದ್ದರೆ ಅವರನ್ನು ಲೈಸೆನ್ಸ್ ಇಲ್ಲದೆ ಲೇವಾದೇವಿ ಮಾಡುತ್ತೀರಾ ಎಂದು ಅವರ ಹತ್ತಿರ ಇರುವುದನ್ನು ದೋಚಿಕೊಂಡು ಬರುತ್ತಿದ್ದಾರೆ, ಇಂಥಾದ್ದು ಆಗಬಾರದು. ಈ ಕಾನೂನನ್ನ ಕಠಿಣವಾಗಿ ಮಾಡಿದರೂ ಕೂಡ ಸ್ವಲ್ಪ ರಿಯಾಯಿತಿಯನ್ನು ತೋರುವಂತಹ ಮಾರ್ಪಾಡು ಮಾಡಬೇಕು ಆ ರೀತಿ ಸ್ವಲ್ಪ ಮಾರ್ಪಾಡು ಮಾಡದಿದ್ದರೆ ಅನಾಥ ಹೆಣ್ಣುಮಕ್ಕಳು, ದುಡಿಯುವುದಕ್ಕೆ ಯಾರೂ ಇಲ್ಲದೆ ಇರುವವರು ಸ್ವಲ್ಪ ಹಣವನ್ನು ಬ್ಯಾಂಕಿನಲ್ಲಿಟ್ಟರೆ ಕಡಿಮೆ ಬಡ್ಡಿ ಬರುತ್ತದೆ ಎಂದು ಅದನ್ನು ಬೇರೆ ಯಾರಿಗಾದರೂ ಖಾಸಗಿಯವರಿಗೆ ಬಡ್ಡಿ ಕೊಟ್ಟುಕೊಂಡು ಜೀವನ ಮಾಡತಕ್ಕವರಿಗೆ ಅವರಿಗೆ ಜೀವನಕ್ಕೆಲ್ಲದೆ ಊಟಕ್ಕಿಲ್ಲದೆ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕು. ಅಂಥವರಿಗೆ ಇವರಲ್ಲಿ ಅನುಕೂಲವಾಗುವಂತೆ ಅವಕಾಶವನ್ನು ಕಲ್ಪಿಸಬೇಕು. ಮತ್ತು ಯಾವುದೋ ಸಣ್ಣ ಪುಟ್ಟ ಜನಗಳ ಮನೆಗೆ ಹೋಗಿ ಲೈಸೆನ್ಸ್ ಇಲ್ಲದೆ ಮನಿಲೆಂಡರ್ ಬಿಜಿನೆಸ್ ಮಾಡುತ್ತಾರೆ ಎಂದು ಅವರ ಮನೆಯಲ್ಲಿ ಇರುವುದನ್ನೆಲ್ಲಾ ದೋಚಿಕೊಂಡು ಬಂದು ಅವರ ಫ್ಯಾಮಿಲಿಯವರನ್ನು ದಬ್ಬಾಳಿಕೆ ಮಾಡುವ ಸ್ಥಿತಿ ತಪ್ಪಬೇಕು. ಇಷ್ಟು ಹೇಳಿ ನಾನೂ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಪಿ. ಎಂ. ಭಾಂಗಿ (ಜಮಖಂಡಿ).— ಮಾನ್ಯ ಅಧ್ಯಕ್ಷಣೆಯವರೇ ಮಾನ್ಯ ಸಹಕಾರ ಮಂತ್ರಿಗಳು ಈ ಸಭೆಯಲ್ಲಿ ತಂದಿರತಕ್ಕ ಮನಿಲೆಂಡರ್ ಮಸೂದೆಯನ್ನು ತಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಮಸೂದೆಯಿಂದ ಸಾಹುಕಾರರಿಗೆ ಮಾರಕವಾಗಿದೆ. ೨೧ನೇ ಕಲಂ ಮೇರೆಗೆ ಅಸೆಸ್‌ಮೆಂಟ್ ಮಾಡಬೇಕಾದರೆ ಯಾವ ಪ್ರಕಾರ ನೋಟ್ ಕೊಡಬೇಕು ಅದರಂತೆ ತಮ್ಮ ಲೆಕ್ಕಪತ್ರಗಳು ಇಲ್ಲದಿದ್ದರೆ ಅವರು ತಪ್ಪಿತಸ್ಥರಾಗಿ ಈ ಶಾಸನದ ೩೯ನೇ ಕಲಂ ಪ್ರಕಾರ ಅವರಿಗೆ ಶಿಕ್ಷೆಯಾಗುತ್ತಿತ್ತು. ಅದನ್ನೆಲ್ಲಾ ತಪ್ಪಿಸಿ ಕೋರ್ಟಿಗೆ ಹೋಗಿ ದಾವಾ ಹಾಕಿ ನಂತರ ಆ ದಾವಾಕ್ಕೆ ಲೈಸೆನ್ಸ್ ತೆಗೆದುಕೊಂಡು ಡಿಕ್ರಿ ಮಾಡಿ ಪರಿಹಾರ ಕೊಡುವ ಪ್ರಸಂಗ ಏನಿತ್ತು ಆ ಅನ್ಯಾಯವನ್ನು ತಪ್ಪಿಸುವುದಕ್ಕೋಸ್ಕರ ಮಾನ್ಯ ಮಂತ್ರಿಗಳು ಈ ಮಸೂದೆಯ ೧೧ನೇ ಕಲಂ ಮತ್ತು ಕೆಲವು ಸಬ್ ಕಲಂಗಳನ್ನು ತಂದದ್ದು ಯೋಗ್ಯ. ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸುವುದಕ್ಕೆ ಶಾಸನವನ್ನು ಮಾಡುವುದು ಉಚಿತವಾಗುತ್ತದೆ. ಈ ದೃಷ್ಟಿಯಿಂದ ಇವೊತ್ತು ಮಾನ್ಯ ಮಂತ್ರಿಗಳು ೧೧ನೇ ಕಲಂಗೆ ಸಂಬಂಧಪಟ್ಟ ಹಾಗೆ ತಂದಿರತಕ್ಕ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಆ ಮೇಲೆ ಕ್ಲಾಜ್ ೮ರಲ್ಲಿ ಹೇಳಿರುವಂತೆ ಈ ಕಾಯಿದೆ ಪ್ರಕಾರ ಯಾರು ಹಣ ಕೊಡುತ್ತಾರೆ ಅವರು ಪೆನಾಲ್ಟಿಯನ್ನು ಕೊಟ್ಟಮೇಲೆ ಮನಿಲೆಂಡರ್ ಲೈಸೆನ್ಸ್ ಕೊಡುವುದು ಸರಿಯಲ್ಲ.

ಶ್ರೀ ಕೆ. ಎಚ್. ರಂಗನಾಥ — ನಾನು ಇದಕ್ಕೆ ಒಂದು ತಿದ್ದುಪಡಿಯನ್ನು ತರುತ್ತೇನೆ.

ಶ್ರೀ ಪಿ. ಎಂ. ಭಾಂಗಿ.— ತಾವು ಆ ರೀತಿ ಇದಕ್ಕೆ ಒಂದು ತಿದ್ದುಪಡಿಯನ್ನು ತರುವುದಾದರೆ ನಾನು ಅದನ್ನು ಸ್ವಾಗತಿಸುತ್ತೇನೆ.

ಇನ್ನೊಂದು ವಿಷಯವನ್ನು ಹೇಳುವುದಾದರೆ ಈ ಕಾಯಿದೆಯ ೫ನೇ ಕಲಂನಲ್ಲಿ ಮನಿಲೆಂಡಿಂಗ್ ಬಿಜಿನೆಸ್ ಎನ್ನುವ ಶಬ್ದವನ್ನು ಉಪಯೋಗ ಮಾಡಿದ್ದಾರೆ. ಇದರಲ್ಲಿ ಸಿಂಗಲ್ ಟ್ರಾನ್‌ಜಾಕ್ಷನ್ ಯಾರು ಮಾಡುತ್ತಾರೆ ಅದು ಮನಿಲೆಂಡಿಂಗ್ ಬಿಜಿನೆಸ್ ಆಗುವುದಿಲ್ಲ ಎಂದು ಹೈಕೋರ್ಟಿನಲ್ಲಿ ಹೇಳಿದ್ದಾರೆ. ಆದ್ದರಿಂದ ಅಂಥವರಿಗೆ ಈ ಮಸೂದೆ ಅನ್ವಯಿಸುವುದಿಲ್ಲ. ಕೋರ್ಟಿನಲ್ಲಿ ಈ ಪ್ರಕಾರ ಸಾಹುಕಾರರಿಗೆ ರಕ್ಷಣೆ

ಕೊಟ್ಟಿದ್ದಾರೆ. ಆದ್ದರಿಂದ ಬಿಜಿನೆಸ್ ಶಬ್ದವನ್ನು ತೆಗೆದುಹಾಕಿ ಟ್ರಾನ್ಸ್‌ಜಾಕ್ಷನ್ ಆಫ್ ಮನಿಲೆಂಡಿಂಗ್ ಎಂದು ಹಾಕಿದರೆ ಒಳ್ಳೆಯದಾಗುತ್ತದೆ. ಇದನ್ನು ತೆಗೆಯದೇ ಹೋದರೆ ಸಾಹುಕಾರರು ತಪ್ಪಿಸಿಕೊಳ್ಳುವುದಕ್ಕೆ ಬೇರೊಂದು ಮಾರ್ಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಚಿಕ್ಕಪುಟ್ಟ ವ್ಯಾಪಾರಸ್ಥರು ವ್ಯಾಪಾರದ ಸೌಲಭ್ಯಕ್ಕಾಗಿ ಸಾಹುಕಾರರಿಂದ ಪಡೆಯುವ ಸಾಲಕ್ಕೆ ವಿನಾಯ್ತಿಯನ್ನು ಕೊಟ್ಟಿದ್ದಾರೆ. ತೆಗೆದು ಕೊಡಬಾರದು. ಚಿಕ್ಕಪುಟ್ಟ ವ್ಯಾಪಾರಸ್ಥರು ಬಹಳ ಬಡ್ಡಿಯನ್ನು ತುಂಬಿ ಸಾಹುಕಾರರಿಂದ ಸಾಲ ತೆಗೆದು ತೊಂದರೆಗೆ ಒಳಗಾಗುತ್ತಾರೆ. ಆಗ ಅವರು ಕನ್‌ಸ್ಯೂಮರುಗಳಿಗೆ ಹೆಚ್ಚು ದರದಲ್ಲಿ ಎಸೆನ್ಷಿಯಲ್ ಕಮಾಡಿಟೀಸ್‌ಗಳನ್ನು ಮಾರುವ ಪ್ರಸಂಗ ಬರುತ್ತದೆ. ಆದ್ದರಿಂದ ಚಿಕ್ಕಪುಟ್ಟ ವ್ಯಾಪಾರಸ್ಥರು ವ್ಯಾಪಾರದ ಸೌಲಭ್ಯಕ್ಕಾಗಿ ಪಡೆಯುವ ಸಾಲವನ್ನು ಶಾಸನದ ವ್ಯಾಪ್ತಿಗೆ ಒಳಪಡಿಸಬೇಕು. ಮತ್ತು ವೇವಾದೇವಿ ಎಂದರೆ ಒಂದೇ ವ್ಯವಹಾರ ನಡೆದಿದ್ದರೂ ಕೂಡ ಅದಕ್ಕೂ ಕೂಡ ಈ ಕಾನೂನು ಅನ್ವಯವಾಗುವಂತೆ ತಿದ್ದುಪಡಿ ಮಾಡಬೇಕು.

SRI K.H. RANGANATH.—This Act regulates the business of money-lending. We have not completely taken out money-lending I can understand if the Hon'ble Member were to use the words 'small or petty trader' or some such thing, but the word 'trader' is a very comprehensive word. Suppose we take out this, we will be taking out the trading community altogether. From that angle I would request the Hon'ble Member to enlighten us.

ಶ್ರೀ ಪಿ ಎಂ. ಭಂಗಿ.— ಟ್ರೇಡರ್ ಎಂದರೆ ಎಲ್ಲಾ ರೀತಿಯ ವ್ಯಾಪಾರಸ್ಥರೂ ಬಂದು ಬಿಡುತ್ತಾರೆ. ಆದ್ದರಿಂದ ಇದನ್ನು ವಿಚಾರ ಮಾಡಿ ಚಿಕ್ಕಪುಟ್ಟ ವ್ಯಾಪಾರಸ್ಥರಿಗೆ ಇದರಲ್ಲಿ ವಿನಾಯ್ತಿಯನ್ನು ಕೊಡಬಾರದು.

ಇನ್ನೊಂದು ವಿಚಾರವೇನೆಂದರೆ ರಾಜ್ಯದ ತುಂಬ ಈ ಕಾಯಿದೆಯು ಹಿತದಿಂದ ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಮಾರ್ಟಿಗೇಜ್ ಡೀಡ್ಸ್ ಕೊಡುವುದನ್ನು ನಿಲ್ಲಿಸಿ ಸೇಲ್ ಮಾಡುವುದಕ್ಕೆ ಮಾತ್ರ ಅವಕಾಶವನ್ನು ಕೊಟ್ಟು ಸಾಲಗಾರರು ಸೇಲ್ ಡೀಡ್ ಮಾಡಿಕೊಟ್ಟು ಸಾಕಷ್ಟು ಹಣವನ್ನು ಪಡೆದಿದ್ದಾರೆ ಈಗ ೩-೪ ವರ್ಷಗಳಿಂದ ಮಾರ್ಟಿಗೇಜ್ ಡೀಡ್ಸ್ ಆಗಿಲ್ಲ. ತಾವು ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇಕಾದರೆ ಎನ್‌ಕ್ವೈರಿ ಮಾಡಿರಿ. ಮಾರ್ಟಿಗೇಜ್ ಡೀಡ್ಸ್‌ಗೆ ಇವೊತ್ತು ರಿಜಿಸ್ಟ್ರೇಷನ್ನಿಗೆ ಅವಕಾಶವಿಲ್ಲ. ಸೇಲ್ ಡೀಡ್ಸ್ ವಿಷಯದ ಪತ್ರ ಏನಿರುತ್ತದೆ ಅದನ್ನು ಕೇವಲ ಹಣವನ್ನು ಕೊಟ್ಟ ನಂತರ ಅದನ್ನು ರೀಕನ್‌ವೇ ಮಾಡುತ್ತಾರೆ. ಸಾಲಗಾರರು ಭೂಮಿಯನ್ನು ಸಹಿತ ಬಿಡುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಬಂದು ಕೇಸು ಸುಪ್ರೀಮ್ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಆದ್ದರಿಂದ ಇದನ್ನು ಸರ್ಕಾರದವರು ಗಮನಕ್ಕೆ ತೆಗೆದು ಕೊಂಡು ಅದು ಹಿಯರಿಂಗ್ ಬರುವಂತೆ ಮಾಡಿ ಅದನ್ನು ಇತ್ಯರ್ಥ ಮಾಡಬೇಕು. ಮತ್ತು ಈ ಬಂದು ಕಾಯಿದೆಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ಸರಿಪಡಿಸಿ ಬೇರೆ ಬಂಧು ಕಾಯಿದೆಯನ್ನು ತರಬೇಕೆಂದು ನಾನು ಸೂಚಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದೆ ಮಾನ್ಯ ಸಚಿವರು ಮಂಡಿಸಿರತಕ್ಕ ಕರ್ನಾಟಕ ಮನಿಲೆಂಡರ್ ಬಿಲ್ ಏನಿದೆ ಇದನ್ನು ಕೆಲವು ದೃಷ್ಟಿಯಿಂದ ನಾವು ವಿರೋಧ ಮಾಡಿದರೂ ಕೂಡ ತಾತ್ವಿಕ ದೃಷ್ಟಿಯಿಂದ ಸ್ವಾಗತ ಮಾಡಬೇಕಾಗಿದೆ. ಜೊತೆಗೆ ನಮ್ಮ ಹಣ ಕಾಸಿನ ವ್ಯವಹಾರ ಮಾಡತಕ್ಕ ಸಂದರ್ಭದಲ್ಲಿ ಒಂದುವೇಳೆ ಲೈಸೆನ್ಸ್ ಪಡೆಯದೇ ಯಾರಾದರೂ ವ್ಯವಹಾರ ಮಾಡಿದರೆ ಅವರು ಇಂದು ಕಾನೂನು ಪ್ರಕಾರ ಶಿಕ್ಷೆಗೆ ಒಳಗಾಗಬೇಕು. ಅಪರು ಅದರ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಈ ತಿದ್ದುಪಡಿಯಲ್ಲಿ ಒಂದು ವಿಷಯ ಕಂಡುಬಂದದ್ದು ಏನು ಎಂದರೆ ಶ್ರೀಮಾನ್ ನಾಗಣ್ಣನವರು ಹೇಳಿದಹಾಗೆ ಇವತ್ತು ಹಣಕಾಸನ್ನು ಕೊಟ್ಟು ಬಡ್ಡಿ ಸಂಪಾದನೆ ಮಾಡತಕ್ಕಂಥ ಒಂದು ವರ್ಗವೇ ನಿರ್ಮಾಣವಾಗಿದೆ. ಇದು ಸಾಕಷ್ಟು ಶೋಷಣೆಯನ್ನು ಸಮಾಜದಲ್ಲಿ ಮಾಡಿದೆ. ತಾವು ಇವರ ಶೋಷಣೆಯನ್ನು ಗಮನಿಸಿದರೆ ಬಹುಶಃ ಕೋರ್ಟಿನಲ್ಲಿ ದಾವಾ, ಎಕ್ಸಿಕ್ಯೂಷನ್, ಡಿಕ್ರಿಗಳು ಏನಿವೆ, ಒಂದುವೇಳೆ ಲೈಸನ್ಸ್ ಪಡೆಯದೇ ಯಾರು ಮಾಡಿದ್ದಾರೆ ಅವುಗಳನ್ನೆಲ್ಲಾ ರದ್ದುಪಡಿಸಬೇಕಾದ ಸಂದರ್ಭ ಜಾಸ್ತಿ ಇರುತ್ತದೆ. ಇವತ್ತು ಹಣಕಾಸಿನ ವ್ಯವಹಾರವನ್ನು ಸಂಪೂರ್ಣವಾಗಿ ತ್ಯಾಜ್ಯ ಮಾಡಿಲ್ಲ. ಹಣಕಾಸಿನ ವ್ಯವಹಾರ ಮಾಡತಕ್ಕ ಕಾಲದಲ್ಲಿ ಲೆಕ್ಕಪತ್ರಗಳನ್ನು ಸರಿಯಾಗಿ ಇಡಬೇಕು,

ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ಲೆಕ್ಕವನ್ನು ಕೊಡಬೇಕು ಎನ್ನುವುದು ಇದರ ಮುಖ್ಯ ಉದ್ದೇಶ ವಾಗಿದೆ. ಇದುವರೆಗೆ ಇದು ಆಗಿಲ್ಲ. ಕೆಲವರು ಸಣ್ಣವರಿಗೆ ಕಷ್ಟ ಬಂದಾಗ ಹಣ ಕೊಡುತ್ತಾರೆ ಎನ್ನುವುದು ಸರ್ವೇ ಸಾಧಾರಣವಾದ ಮಾತು. ಆದರೆ ಇವರನ್ನು ಗಮನದಲ್ಲಿಟ್ಟುಕೊಂಡು ಲಿಬರಲ್ ಮಾಡುತ್ತಾ ಹೋದರೆ. ದೊಡ್ಡ ಮಹಾನುಭಾವರು ತಿಮಿಂಗಿಲಗಳಾಗಿ ಹಾಗೆ ಉಳಿಯುತ್ತಾರೆ. ಶ್ರೀಮಾನ್ ನಾಗಣ್ಣನವರು ಹೇಳಿದಹಾಗೆ ಇಂತಹವರು ಈ ಊರಿನಲ್ಲಿ ಏಕೆ ಹೆಚ್ಚು ಕಡಿಮೆ ಎಲ್ಲಾ ಪ್ರದೇಶಗಳಲ್ಲೂ ಇದ್ದಾರೆ. ನಮ್ಮ ಸಾಗರ ಹಾಗೂ ಶಿಕಾರಿಪುರಕ್ಕೆ ಹೋದರೆ ಅಂತಹವರನ್ನು ನೋಡ ಬಹುದು. ಅವರು ಮೂರು ಹೊತ್ತೂ ಕೋರ್ಟನ್ನು ಕಾಯುತ್ತಾ ಇರುತ್ತಾರೆ, ಅವರಿಗೆ ಆದೇ ಉದ್ಯೋಗ. ಸಣ್ಣ ಜನ ಯಾವುದೇ ಕಾರಣಕ್ಕಾಗಿ ಜಮೀನನ್ನು, ಮನೆಯನ್ನು ಬರೆದುಕೊಟ್ಟು ಬಂಗಾರದ ಸಾಮಾನುಗಳನ್ನು ಇಟ್ಟು ಹಣವನ್ನು ಪಡೆದುಕೊಂಡಿರುತ್ತಾರೆ. ಇವರು ಸಾಲ ಕೊಡು ವವರು ಇದ್ದರೆ ತಮ್ಮನ್ನೇ ಮಾರಿಕೊಳ್ಳುತ್ತಾರೆ. ದೊಡ್ಡ ವ್ಯವಹಾರ ಮಾಡತಕ್ಕ ಜನರು ಸಾಮಾನ್ಯ ಜನರನ್ನು ಸಾಕಷ್ಟು ಪರಿಣಾಮಕಾರಿಯಾಗಿ ಶೋಷಣೆ ಮಾಡಿದ್ದಾರೆ. ಗುಜರಾತಿನಿಂದಲೋ, ರಾಜಸ್ಥಾನದಿಂದಲೋ ಬಂದು ಹಣಕಾಸಿನ ವ್ಯವಹಾರ ಮಾಡಿರುವುದನ್ನು ಗಮನಕ್ಕೆ ತೆಗೆದುಕೊಂಡರೆ, ನೀವು ಏನು ಡೆಟ್ ರಿಲೀಫ್ ಆಕ್ಟ್ ಮಾಡಿದ್ದೀರಿ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಮಾಡ ಬೇಕಾದಂಥ ಅಗತ್ಯ ಜಾಸ್ತಿ ಇದೆ. ಬಹಳ ಜನ ಶೆಟ್ಟರುಗಳು ಮತ್ತು ಇತರರು ಕಣ್ಣಿಗೆ ಕಾಣದ ಹಾಗೆ ಶೋಷಣೆ ಮಾಡಿರತಕ್ಕ ಪರಿಸ್ಥಿತಿ ಇದೆ. ಇವತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಅಗತ್ಯ ಜಾಸ್ತಿ ಇದೆ. ಕಳ್ಳಹಣಪಡೆದಿರುವವರನ್ನು ಇವತ್ತು ಪತ್ತೆ ಹಚ್ಚಬೇಕಾಗಿದೆ. ಕೆಲವರು ಮದುವೆ ಮುಂಜಿಗೆ ಹಣ ಹೊಟ್ಟರು ಎಂದು ನೋಡಿಕೊಂಡು ಹೊರಟರೆ ದೊಡ್ಡ ದೊಡ್ಡ ತಿಮಿಂಗಿಲಗಳು ತಪ್ಪಿಸಿಕೊಳ್ಳುತ್ತಾರೆ. ಆದುದರಿಂದ ನಾವು ಈ ಸಂದರ್ಭಕ್ಕೆ ಅನುಸಾರವಾಗಿ ನಡೆದುಕೊಳ್ಳಬೇಕಾದ ಪರಿಸ್ಥಿತಿಗೆ ಬಂದು ಮುಟ್ಟಿದ್ದೇವೆ. ಭೂಸುಧಾರಣೆಯಲ್ಲಿ ಒಂದು ಕಾಲದಲ್ಲಿ ಕೆಲವರಿಗೆ ಏನಾಯಿತಿ ಕೊಡಬೇಕು ಎಂದು ಇತ್ತು. ಈಗ ಅದು ಬದಲಾವಣೆಯಾಗಿ ಏನಾಯಿತಿಯಂನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ. ಈ ಸಂದರ್ಭದಲ್ಲಿ ಹಣಕಾಸಿನ ವ್ಯವಹಾರ ಯಾರೇ ಮಾಡಲಿ ಅವರು ಕ್ರಮಬದ್ಧವಾಗಿ ನಡೆದುಕೊಳ್ಳಬೇಕಾಗಿ ಬರುತ್ತದೆ. ಇವತ್ತು ಆ ಒಂದು ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ. ಮಾನ್ಯ ಸಚಿವರು ಸೆಕ್ಷನ್ ೮ಕ್ಕೆ ತಿದ್ದುಪಡಿಯನ್ನು ಮಂಡಿಸಿದ್ದಾರೆ. ಅದರಲ್ಲಿ ನನಗೆ ಒಂದು ಸಂಶಯ ಇದೆ ಏನೆಂದರೆ, ಹಳೇ ಪೆಂಡಿಂಗ್ ಕೇಸುಸ್, ಹಳೇ ದಾವಾಗಳು ಏನು ನಡೆಯುತ್ತಿವೆ ಅವೆಲ್ಲಾ ಹಳೇ ಕಾನೂನು ಪ್ರಕಾರ ಇತ್ಯರ್ಥ ಮಾಡಬೇಕು ಎಂದು ಇದೆ.

SRI K. H. RANGANATH.—Pending execution on the date of the commencement of this Act. ಅಂದರೆ ಆರ್ಡಿನೆನ್ಸ್ ಈಗಾಗಲೇ ಬಂದು ಆಗಿದೆ. ಹಳೇ ಕೇಸ್‌ಗಳು ಏನಿವೆ ಅವೆಲ್ಲಾ ಹಳೇ ಕಾನೂನು ಪ್ರಕಾರ ಇತ್ಯರ್ಥ ಆಗಬೇಕು. ತದನಂತರ ಬಂದಿರುವುದಕ್ಕೆ ಆ ಕಾನೂನು ಅಪ್ಲೈ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವತ್ತಿನದಿವಸ ಡಿಕ್ರಿಯಾದರೂ, ಎಕ್ಸಿಕ್ಯೂಷನ್ ಆಗಿದ್ದರೂ, ಪೆಂಡಿಂಗ್ ಇದ್ದರೂ ಅವಕ್ಕೆಲ್ಲಾ ಹಳೇ ಕಾನೂನು ಪ್ರಕಾರ ನಡೆದುಕೊಳ್ಳಬೇಕಾಗಿ ಬರುತ್ತದೆ. ನಾವು ಡೆಟ್ ರಿಲೀಫ್ ಆಕ್ಟನ್ನು ಜಾರಿಗೆ ಕೊಡುವ ಕಾಲದಲ್ಲಿ ಪೆಂಡಿಂಗ್ ಇದ್ದರೂ ಮಾಡಿದ್ದೇವೆ, ಅಪೀಲು, ಎಕ್ಸಿಕ್ಯೂಷನ್ ಇದ್ದರೂ ಸಂಪೂರ್ಣವಾಗಿ ಲಿಕ್ವಿಡೇಟ್ ಆಗುವಂತೆ ಮಾಡಿದ್ದೇವೆ. ನ್ಯಾಯವಾಗಿ ಮಾಡಿದ್ದರೆ ಏನು ಬಾಧಕ ಇರಲಿಲ್ಲ. ಇವತ್ತು ಯಾರ ಒತ್ತಾಯ ಜಾಸ್ತಿ ಇದೆ ? ಇವತ್ತು ಡೆಟ್ ರಿಲೀಫ್ ಆಕ್ಟ್‌ನಲ್ಲಿ ಏನು ಪ್ರಿನ್ಸಿಪಲ್ಸ್‌ನ್ನು ಎಸ್ಟಾಲ್ಷ್ ಮಾಡಿದ್ದೀರೋ ಅದೇ ಪ್ರಿನ್ಸಿಪಲ್ಸನ್ನು ಇದರಲ್ಲಿ ಎಕ್ಸಿಕ್ಯೂಟಿವ್ ಮಾಡಬಹುದಾಗಿತ್ತು. ಇವತ್ತು ಲೈಸನ್ಸ್ ಪಡೆಯದೇ ಹೋದರೆ ಕೇಸ್ ವಜಾ ಆಗುತ್ತಿತ್ತು. ೬ ತಿಂಗಳೊಳಗೆ ಇದ್ದರೂ ಕೂಡ ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವಕಾಶ ಕೊಟ್ಟು ೬ ತಿಂಗಳೊಳಗೆ ಲೈಸನ್ಸ್ ತೆಗೆದುಕೊಂಡು ಬಂದು, ಲೈಸನ್ಸ್ ತಂದಿದ್ದೇನೆ ಎಂದು ಹಾಜರು ಪಡಿಸಿದ್ದರೆ ಯಾವತ್ತೂ ಕೇಸನ್ನು ಮುಂದುವರೆಸುವುದಕ್ಕೆ ಸಾಧ್ಯವಿತ್ತು.

ಶ್ರೀ ಕೆ. ಎಚ್. ರಂಗನಾಥ್.—ಅಧ್ಯಕ್ಷರೇ, ಇದು ರೆಗ್ಯುಲೇಟರಿ ಕಾನೂನು. ಇದು ಹಣದ ಲೇವಾದೇವಿ ವ್ಯವಹಾರವನ್ನು ರೆಗ್ಯುಲೇಟ್ ಮಾಡತಕ್ಕಂಥ ಕಾನೂನು. ಇದನ್ನು ಮಾಡುವಾಗ ರೆಟ್ರಾಸ್ಪೆಕ್ಟೀವ್ ರೀತಿಯಲ್ಲಿ ಮಾಡಿದರೂ ಸ್ವಲ್ಪ ತಪ್ಪಾಗುತ್ತದೆ ಎನ್ನುವ ವಿಚಾರ ಇದೆ. ಇದನ್ನು ನಾನು ಅಮೆಂಡ್‌ಮೆಂಟನ್ನು ಮೂವ್ ಮಾಡುವಾಗ ಹೇಳಬೇಕು ಎಂದೇ ಇದ್ದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾನವೀಯತೆಯ ದೃಷ್ಟಿಯಿಂದ ಮಾಡುತ್ತಿದ್ದೀರಾ ?

ಶ್ರೀ ಕೆ. ಎಚ್. ರಂಗನಾಥ್.—ಮಾನವೀಯತೆಯ ದೃಷ್ಟಿಯಿಂದ ಅಲ್ಲ. ಟೆಕ್ನಿಕಲ್ ಆಸ್ಪೆಕ್ಟ್‌ನಿಂದ ಮಾಡಿದ್ದೇವೆ. ಈಗ ಮಾಡಿರುವುದು ಏನಿದೆ ಇದು it is purely technical and legal aspect of it,

It is expedient to make better provision for the regulation and control of transaction of the money lending in the State ನಾವು ಡೆಟ್ ರಿಲೀಫ್ ಆಕ್ಟ್ ಏನಿದೆ ಅದರ ಪ್ರಕಾರ ಇದನ್ನು ರೆಗ್ಯುಲೇಟ್ ಮಾಡುತ್ತಾ ಇಲ್ಲ. ಕೆಲವು ವರ್ಗದವರನ್ನು ಸಾಲದಿಂದ ವಿಮುಕ್ತರನ್ನಾಗಿ ಮಾಡುತ್ತಾ ಇದ್ದೇವೆ, ಅದು ಬೇರೆ. ೧೧ (೨) (೩)ರ ಪ್ರಕಾರ ಒಂದು ಕೋರ್ಟ್‌ನಲ್ಲಿ ಜಡ್ಜ್‌ಗೆ ಡಿಸ್ಕ್ರಿಷನ್ ಇತ್ತು, ಆ ಡಿಸ್ಕ್ರಿಷನ್ನು ಜಡ್ಜ್ ಎಕ್ಸರ್‌ಸೈಸ್ ಮಾಡುತ್ತಿದ್ದರು. He was then bound to stay the proceedings ಅಂಥಾದ್ದು ಏನು ಡಿಕ್ರಿಯಾಗಿರುತ್ತದೆ ಆ ಡಿಕ್ರಿಗೂ ಇದಕ್ಕೂ ಅಪ್ಲೈ ಮಾಡಿದರೆ ಸರಿ ಕಾಣುವುದಿಲ್ಲ, ಅದಕ್ಕೆ ಲೀಗಲ್ ಆಸ್ಪೆಕ್ಟ್ ಇದೆ. Because the regulative measures are prospective in nature. I have consulted the Legal department also in this aspect. From that point of view. I am trying to give benefit to that section of the suits pending. ಅದಕ್ಕೂ ಡೆಟ್ ರಿಲೀಫ್ ಆಕ್ಟ್‌ಗೂ ಸ್ವಲ್ಪ ವ್ಯತ್ಯಾಸಗಳು ಆಗುತ್ತವೆ. ಈ ದೃಷ್ಟಿಯಿಂದ ಅಮೆಂಡ್‌ಮೆಂಟನ್ನು ತರುವುದಕ್ಕೆ ಪ್ರಯತ್ನ ಪಟ್ಟಿದ್ದೇನೆಯೇ ವಿನಹ ಯಾವ ಒತ್ತಾಯದ ದೃಷ್ಟಿಯಿಂದಲೂ ಅಮೆಂಡ್‌ಮೆಂಟನ್ನು ತರುವುದಕ್ಕೆ ಪ್ರಯತ್ನ ಪಡುತ್ತಾ ಇಲ್ಲ. ಕೋರ್ಟಿಗೆ ಅಧಿಕಾರ ಇರುವುದರಿಂದ ಯಾರೇ ಜಡ್ಜ್ ಆಗಲೀ ತನ್ನ ಅಧಿಕಾರ ವ್ಯಾಪ್ತಿಯೊಳಗೆ ಆ ಅಧಿಕಾರವನ್ನು ಚಲಾಯಿಸುವುದಕ್ಕೆ ಅವಕಾಶವನ್ನು ಕೊಡಲಾಗಿದೆ. ಆ ಅವಕಾಶವನ್ನು ಉಪಯೋಗ ಮಾಡಿಕೊಂಡು ಎವಿಡೆನ್ಸ್ ನೋಡಿ ಡಿಕ್ರಿ ಆಗಿರುತ್ತದೆ. ಅದು ಆದಮೇಲೆ ಎಕ್ಸಕ್ಯೂಷನ್ ಪ್ರೊಸೀಡಿಂಗ್ಸ್‌ನಲ್ಲಿ ಬಂಧಿಸಿದರೆ ಅದು ಸರಿಯಾದಂಥ ಕ್ರಮ ಆಗಲಾರದು. From that point of view I am trying to give the benefit to that section of the suits pending.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಮಾತನ್ನು ನಾನು ಒಪ್ಪುತ್ತೇನೆ.

2-00 P. M.

ನಾನಾದರೂ ಕೂಡ ಹಣಕಾಸಿನ ವ್ಯವಹಾರವನ್ನು ನಿಯಂತ್ರಿಸಬೇಕೆಂದು ಹೇಳುತ್ತಿದ್ದೇನೆ. ಇವತ್ತು ಒಬ್ಬ ೧೦ ಲಕ್ಷ ರೂಪಾಯಿಗಳ ವ್ಯವಹಾರ ಮಾಡುತ್ತಾನೆ. ಆಗಲೇ ಲೈಸೆನ್ಸ್ ತೆಗೆದುಕೊಳ್ಳದೆಯೇ ೫ ದಾವಾಗಳನ್ನು ಹಾಕಿದ್ದಾನೆ- ಅದಲ್ಲದೆ ಡಿಕ್ರಿ ತೆಗೆದುಕೊಂಡು ಎಗ್ಜಿಕ್ಯೂಷನ್ನಿಗೆ ಇಟ್ಟಿದ್ದಾನೆ. ಅಂದಮೇಲೆ ಅಂತಹವರ ಬಗ್ಗೆ ಅವನು ದಾವಾ ನಡೆಸುತ್ತಾ ಇರಲಿ, ಡಿಕ್ರಿ ಬಿದ್ದಿರಲಿ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಏನು ತೊಂದರೆ? ಅದನ್ನೇನೂ ರಿಟ್ರಾಸ್ಪೆಕ್ಟಿವ್ ಎಫೆಕ್ಟ್‌ಗೆ ಏನೂ ಕೊಡುವುದಿಲ್ಲ. ಅವನು ಡಿಕ್ರಿ ಪಡೆಯಬಾರದು ಎಗ್ಜಿಕ್ಯೂಷನ್ ಪ್ರೊಸೀಡಿಂಗ್ಸ್ ಮಾಡಬಾರದೆಂದು ನಾವು ಹೇಳುವುದಿಲ್ಲ. ಅವನೂ ಸಹ ಲೈಸೆನ್ಸ್ ತೆಗೆದುಕೊಳ್ಳಲಿ ಎಂದು ಹೇಳುತ್ತೇವೆ. ಈ ರೀತಿಯಾಗಿ ಅವನೂ ಸಹ ಲೈಸೆನ್ಸ್ ತೆಗೆದುಕೊಳ್ಳುವುದರಿಂದ ಅವನ ವ್ಯವಹಾರದ ಬಗ್ಗೆ ನಿಯಂತ್ರಣ ಮಾಡುವುದಕ್ಕೆ ಮತ್ತು ಅವನ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲ ಪುಸ್ತಕಗಳನ್ನು ನೋಡುವುದಕ್ಕೆ ಅವಕಾಶ ಸಿಗುತ್ತದೆ. ಈಗಾಗಲೇ ಅವನಿಗೆ ಸಂಬಂಧಪಟ್ಟಂತೆ ಕೋಟ್ಯಾಂತರ ರೂಪಾಯಿಗಳ ವ್ಯವಹಾರಗಳು ಇನ್ನೂ ಪೆಂಡಿಂಗ್ ಇವೆ. ಎಗ್ಜಿಕ್ಯೂಷನ್ ಪ್ರೊಸೀಡಿಂಗ್ಸ್ ಸಹ ಇನ್ನೂ ನಡೆಯುತ್ತಲೇ ಇದೆ. ನಿಯಂತ್ರಣವನ್ನು ಹಾಕುವಾಗ ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಮುಂಚೆಯೇ ಸರು ತಿಂಗಳುಗಳ ಕಾಲದೊಳಗೆ ಕೂಟ್ ಫೈಲ್ ಮಾಡಬೇಕೆಂದು ಹೇಳಿದ್ದಾರೆ. ಇದರಿಂದ ಹಣಕಾಸಿನ ನಿಯಂತ್ರಣವನ್ನು ಇನ್ನಷ್ಟು ಬಿಗಿವಾಡುವುದಕ್ಕೆ ಅವಕಾಶವಾಗುತ್ತದೆ. ಆಗ ಇನ್ನು ಮುಂದೆ ಯಾವ ಹಣಕಾಸಿನ ವ್ಯವಹಾರವನ್ನೂ ಲೈಸೆನ್ಸ್ ತೆಗೆದುಕೊಳ್ಳದೆ ಮಾಡುವುದಿಲ್ಲ, ಡಿಕ್ರಿ ಮಾಡುತ್ತೇವೆ ಮತ್ತು ಎಗ್ಜಿಕ್ಯೂಷನ್ನಿಗೆ ಹಾಕುತ್ತೇವೆಂದು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಲೈಸೆನ್ಸ್ ಇಲ್ಲದೇ ಹೋದರೆ ದಾವಾ ಹಾಕುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ಅಂತಹವರು ಎಷ್ಟೋ ಜನರು ದಾವಾ ಹಾಕಿದಾರೆ.

ಶ್ರೀ ಕೆ. ಎಚ್. ರಂಗನಾಥ್.—ದಾವಾ ಹಾಕುವ ಪ್ರಶ್ನೆಯೇ ಬೇರೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಟ್ಟಿನಲ್ಲಿ ಅಂತಹವರೂ ಸಹ ದಾವಾ ಹಾಕುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಲೇಬೇಕೆಂದು ನಾನು ಹೇಳುತ್ತೇನೆ.

SRI K. H. RANGANATH.—It is in a way asking me to retain sub-clause 2, 3 and 4. Permitting me to obtain a licence is in a way asking me to retain sub-clause 2, 3 and 4. That is not the intention of the Government. For not taking a licence under section 5 and dealing with money lending activity, a penal Section is there *i.e.*, Sections 38 and 39. But, even then, we have given some laxity under section 11 and under sub-clause 2, 3 and 4 asking the Court to give him some time to obtain the licence. That Iam removing now. ದಾವಾ ಹಾಕಿರುವವರಿಗೂ ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಅದು ಸರಿ. ಹಾಗಾದರೆ I can as well retain sub-clause 2, 3 and 4.

SRI KAGODU THIMMAPPA.—Here is a case where a person has already obtained decrees. There are cases which are under execution process. I am not opposing for having omitted Sub-clauses 2, 3 and 4. My objection is why a man who has already obtained a degree and filed an application for execution without obtaining a licence should not be insisted to obtain a licence. If that is done, then even those transactions can be brought under the regulation of this Act. ಇದನ್ನು ಸಂಪೂರ್ಣವಾಗಿ ಆಲೋಚನೆಮಾಡಬೇಕು. ಇವತ್ತು ೨೦ ಅಂತಗಳ ಕಾರ್ಯಕ್ರಮದ ಹೆಸರಿನಲ್ಲಿ ಈ ತರಹ ಪ್ರಚಾರ ಸಾಕಷ್ಟು ನಡೆಯುತ್ತಿದೆ. ಎಲ್ಲಾ ಕಡೆಗಳಲ್ಲಿ ಋಣಪರಿಹಾರ ಕಾರ್ಯಕ್ರಮದ ವಿಮುಕ್ತಿ ಮುಡುವುದು ನಡೆಯುತ್ತಿದೆ. ಇವತ್ತು ನನಗೆ ತಿಳಿದು ಬಂದಿರುವ ಹಾಗೆ ತಮ್ಮ ಪಕ್ಷದ ಕಾರ್ಯಕರ್ತರೇ ಹಾಸನ ಜಿಲ್ಲೆಯಲ್ಲಿ ಸೇರಿಕೊಂಡು ತಮ್ಮ ಹೆಸರನ್ನೇ ಕೆಡಿಸುತ್ತಿದ್ದಾರೆ. ಇವತ್ತು ಅಲ್ಲಿ ಏನಾಗಿದೆಯೆಂದರೆ, ಸಣ ಸಣ್ಣ ರೈತರು ಕೆಲವಾರು ಏಜೆನ್ಸಿಗಳನ್ನು ಮಾಡಿದ್ದಾರೆ. ಅವುಗಳಲ್ಲಿ ನಿಮ್ಮ ಪಕ್ಷದವರೆ ಅನೇಕರು ಸೇರಿ ಕೊಂಡಿದ್ದಾರೆ. ಅವರು ಅಲ್ಲಿ ಸಾಲಗಳನ್ನು ಹಂಚುವುದು, ಪುನಃ ಅವರೆ ಕೂತುಕೊಂಡು ಸಾಲಗಾರರಿಂದ ಅಲ್ಲಿ ಕೊಟ್ಟ ಹಣವನ್ನು ವಸೂಲುಮಾಡುವುದು ಆಗಿದೆ ಅಂತಹವರಿಗೆ ನಿಮ್ಮ ಯಾವ ಕಾನೂನಿನಲ್ಲಿಯೂ ನಿಯಂತ್ರಣವಿಲ್ಲ. ಇವತ್ತು ಅಂತಹವರು ತಮ್ಮ ಪಕ್ಷದಲ್ಲಿದ್ದೇವೆಂದು ಏನಾದರೂ ಮಾಡಬಹುದೆಂಬ ಅಭಿಪ್ರಾಯವನ್ನು ಪಡೆದಿದ್ದಾರೆ. ಯಾವ ಒಬ್ಬ ಅಧಿಕಾರಿಯಿಂದಲೂ ಕೂಡ ಅವರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಯಾವ ಒಂದು ನಿಯಂತ್ರಣಕ್ಕೂ ಹೆದರದೆ ಸರ್ಕಾರದ ಯಂತ್ರದ ಮೂಲಕ ತಮ್ಮಗೆ ಬರತಕ್ಕ ಸಾಲವನ್ನು ಬಹಿರಂಗವಾಗಿಯೇ ವಸೂಲು ಮಾಡತಕ್ಕ ಕ್ರಮವನ್ನು ಸಹಕಾರಸಂಘದ ಕೆಲವು ಕಡೆಗಳಲ್ಲಿಯೇ ಈಗಾಗಲೇ ಮಾಡುತ್ತಿದ್ದಾರೆ ನಾನು ಅಲ್ಲಿಂದಲೇ ಖಚಿತವಾಗಿ ಈ ಒಂದು ವರ್ತಮಾನವನ್ನು ತರಿಸಿ ಕೊಂಡು ತಿಳಿದು ಕೊಂಡಿದ್ದೇನೆ. ಆದ್ದರಿಂದ ತಾವು ಹಣಕಾಸಿನ ವ್ಯವಹಾರವನ್ನು ನಿಯಂತ್ರಣ ಮಾಡದೆ ಹೋದರೆ ನಿಜವಾಗಿಯೂ ನಿಮ್ಮ ೨೦ ಅಂತಗಳ ಕಾರ್ಯಕ್ರಮಗಳಿಂದ ಅವರ ಕಪಿಮುಷ್ಠಿಯಿಂದ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಒಬ್ಬ ಜಿಲ್ಲಾಧಿಕಾರಿಗಳು ಸ್ವಲ್ಪ ಎಚ್ಚರಿಕೆಯಿಂದ ಕೆಲಸ ಮಾಡಿದ್ದರೆ ಇಂತಹ ಕೆಲಸಗಳಿಗೆ ಅವಕಾಶವಿರುತ್ತಿರಲಿಲ್ಲ. ಅಧಿಕಾರಿಯನ್ನೇ ಬದಲಾಯಿಸುವಂತಹ ವರ್ಗಗಳು ಮತ್ತು ಜನರು ಈಗ ಅಲ್ಲಿ ಇದ್ದಾರೆ ಈಗಾಗಲೇ ಆ ಒಂದು ಕೃತ್ಯಕ್ಕೆ ಪ್ರಯತ್ನ ಪಟ್ಟಿದ್ದಾರೆ. ಏಕೆಂದರೆ ಹಣಕಾಸಿನ ವ್ಯವಹಾರ ಮಾಡತಕ್ಕ ಜನರು ಸಾಕಷ್ಟು ಬಲಯುತವಾಗಿ ಇದ್ದಾರೆ, ಅಂತಹ ಜನರ ಮೇಲೆ ನಿಯಂತ್ರಣ ಮಾಡುವ ಸಂದರ್ಭದಲ್ಲಿ ಇಂತಹ ಕಾನೂನುಗಳಲ್ಲಿ ಸಾಕಷ್ಟು ತಿದ್ದುಪಡಿಯನು ಮಾಡಬೇಕಾಗಿದೆ. ತಾವೇನು ಇದರಲ್ಲಿ ಸ್ಕ್ರೀಜ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಅದು ಸರಿಯಲ್ಲ. ಇದರಲ್ಲಿ ಇನ್ನೂ ಹೆಚ್ಚು ಅಧಿಕಾರವನ್ನು ಕೊಡುವ ಸಂದರ್ಭಗಳೂ ಸಹ ಇವೆ, ಯಾವುದಾದರೂ ಸಂಬಂಧಪಟ್ಟ ಅಧಿಕಾರಿಗೆ

ತಮ್ಮ ಲೆಕ್ಕಪತ್ರಗಳನ್ನು ಒಪ್ಪಿಸಬೇಕೆಂದು ಹೇಳಿದಾಗ ಪ್ರತಿಯೊಂದು ವ್ಯವಹಾರವನ್ನು ಗ್ರಾಮ ಪಂಚಾಯತಿ ಇಡಬೇಕು. ಈಗ ಯಾವ ಒಂದು ಅಧಿಕಾರವನ್ನು ಇದರಲ್ಲಿ ಕೊಟ್ಟಿದ್ದೀರೋ ಅದು ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಅಧಿಕಾರವನ್ನು ಅವರಿಗೆ ಕೊಡುವುದಕ್ಕಾಗಿ ಈ ತಿದ್ದುಪಡಿಯನ್ನು ಇನ್ನೂ ಚೆನ್ನಾಗಿ ವಿಚಾರ ಮಾಡಬೇಕೆಂದು ಹೇಳಿ, ಅದರ ಬಗ್ಗೆ ನಾನು ಒತ್ತಾಯ ಮಾಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮನಾಬಾದ್).—ಮಾನ್ಯ ಅಧ್ಯಕ್ಷರೇ ಈಗ ಮುನಿಲೆಂಡರ್ಸ್ ಆಕ್ಟ್ ಬಂದಿದೆ. ಇದನ್ನು ನಾನು ಸ್ವಾಗತಿಸುತ್ತಾ ಇದು ಈಗ ಟೈಮ್‌ಲಿ ಬಂದಿದೆ ಎಂಬುದಾಗಿ ನಾನು ಹೇಳುತ್ತೇನೆ. ಇಂಹಹ ಒಂದು ಬಿಲ್ಲನ್ನು ತರುವುದರಿಂದ ದೇಶದಲ್ಲಿ ದೌರ್ಜನ್ಯ, ಹಾವಳಿ ಹಾಗೂ ಸುಲಿಗೆ ನಡೆಯುವುದು ಹೆಚ್ಚಾಗುತ್ತಾ ಇದೆ. ಇಂಥ ದ್ದನ್ನು ನಿಲ್ಲಿಸುವುದಕ್ಕೆ ಒಂದು ಕೊಡಲಿ ಏಟು ಬೇಕೆಂದು ನಾನು ಹೇಳುತೆ ೀನ. ಮೊದಲಿಂದಲೂ ಕೆಲವರು ಲೈಸೆನ್ಸ್ ಇಲ್ಲದೆಯೆ ಲೇವಾದೇವಿ ವ್ಯವಹಾರ ಮಾಡಿ ಮನಿ ಲೆಂಡಿಂಗ್ ನಡೆಸಿ ತುಂಬಾ ಜನಗಳಿಗೆ ಅನ್ಯಾಯಗಳು ಆದರಲ್ಲಿ ಬಡವರಿಗೆ ಪೆಟ್ಟು ತಿಂದರೆ ಯಾಗಬೆತ್ತಿತ್ತಾ. ಲೈಸೆನ್ಸ್ ಆದಕ್ಕಾಗಿ ಪುನಃ ಪಡೆಯುವುದಕ್ಕೋಸ್ಕರ ಕೋರ್ಟಿಗೆ ಸ್ಪೆಷಲ್ಲಾಗಿ ಕೊಡುವ ಅಧಿಕಾರವಿತ್ತಾ ಆ ಕಾನೂನನ್ನು ಈ ಮಸೂದೆ ಕಳೆದು ಕೊಂಡಿದೆ. ಆದರೆ ಆ ಅಧಿಕಾರ ಕೋರ್ಟಿನಲ್ಲಿ ಏನಿದೆಯೋ ಅದರ ಪ್ರಕಾರ ಒಮ್ಮೆ ಲೈಸೆನ್ಸ್ ಇಲ್ಲದಂತೆ ಯಾರೂ ಕೂಡ ಡಿಕ್ರಿ ಪಡೆಯುವ ಹಾಗೆ ಇಲ್ಲ. ಲೈಸೆನ್ಸ್ ಇಲ್ಲದೆ ಕೋರ್ಟಿನಲ್ಲಿ ವ್ಯವಹಾರಮಾಡಿ ಸೂಟ್ ಹಾಕಬಹುದು. ಇದರಲ್ಲಿ ಟೆಕ್ನಿಕಲ್ ಮತ್ತು ಲೀಗಲ್ ಡಿಫಿಕಲ್ಟಿ ಇದೆಯೆಂದು ಹೇಳಿದರು. ಇದನ್ನು ರೆಗ್ಯುಲೇಷನ್ ರೂಪದಲ್ಲಿ ತಂದಿದ್ದಾಗಿದೆ, ಲಾ ಡಿಪಾರ್ಟ್‌ಮೆಂಟ್ ಒಪೀನಿಯನ್ ಇದೆ, ಆ ರೀತಿಯಾಗಿ ಇರುವುದರಿಂದ ಪೆಂಡಿಂಗ್ ಸೂಟ್ಸ್ ಮತ್ತು ಎಗ್ಸಿಕ್ಯೂಷನ್ ಪ್ರೊಸೀಡಿಂಗ್ಸ್ ಏನಿವೆಯೋ ಅವನ್ನು ಹೊಸ ತಿದ್ದುಪಡಿ ಪ್ರಕಾರ ಕಾನೂನುಗಳು ಇದ್ದಂತೆ ಕೋರ್ಟಿಗಳಲ್ಲಿ ನಡೆಸಿಕೊಂಡು ಹೋಗಬೇಕು. ಒಂದು ಕಡೆ ತಿದ್ದುಪಡಿಯನ್ನು ಪ್ರಗತಿಯೋಗೆ ತರುತ್ತಾರೆ, ಇನ್ನೊಂದು ಕಡೆ ತಿದ್ದುಪಡಿಯನ್ನು ತಿದ್ದುಪ ಗೆ ಹೊಸದಾಗಿ ತರುವುದು, ಇದು ಸರಿಯಲ್ಲ. ಇತ್ತೀಚೆಗೆ ಕೊಸಹೊಸ ತಿದ್ದುಪಡಿಗಳನ್ನು ಈ ಮಸೂದೆಗೆ ತರುತ್ತಾ ಇರುವುದನ್ನು ನೋಡಿದರೆ ಪೆಂಡಿಂಗ್ ಸೂಟ್ ಗಳಿಗೆ ಮತ್ತು ಎಗ್ಸಿಕ್ಯೂಷನ್ ಪ್ರೊಸೀಡಿಂಗ್ಸ್‌ಗೆ ಏನು ಅನುಕೂಲವಾಗುತ್ತದೆ? ಆದರಲ್ಲಿ ಟೆಕ್ನಿಕಲ್ ಡಿಫಿಕಲ್ಟೀಸ್ ಇವೆ. ಈಗ ತಂದಿರುವ ತಿದ್ದುಪಡಿಯಿಂದ ನಾವು ಕೋರ್ಟಿನಲ್ಲಿ ಸೂಟ್ ಮಾಡಿದಮೇಲೆ ಸ್ಪೆಷಲ್ ಡಿಕ್ರಿ ಪಡೆಯುವುದಕ್ಕಾಗುವುದಲ್ಲವೆಂದು ಹೇಳುತ್ತೇನೆ. ಇದು ಹೋದಸಾರಿ ಇತ್ತು. ಅದನ್ನು ಈಗ ತೆಗೆದು ಹಾಕುತ್ತಿದ್ದಾರೆ. ಆದರೆ ಇವರು ಇದು ಪ್ರಗತಿಪರವಾಗಿದೆಯೆಂದು ಹೇಳುತ್ತಿದ್ದಾರೆ. ಇದಕ್ಕೆ ಏನೆತ್ತೊಂದಾ ಸಾರಿ ರಿ—ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಪೆಂಡಿಂಗ್ ಸೂಟ್ಸ್ ಬಗ್ಗೆ ಏನು ತಿದ್ದುಪಡಿಯನ್ನು ಇಲ್ಲಿ ತಂದಿದ್ದಾರೆಯೋ ಅದರಿಂದೇನೂ ಲಾಭವಾಗುವುದಿಲ್ಲ. ಅದಕ್ಕೆ ಕೆಲವಾರು ಕಾರಣಗಳನ್ನು ಇಲ್ಲಿ ಮಾನ್ಯ ಚಿವರು ಹೇಳಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್.—ಕ್ಲಾಜ್ ರೆಕ್ಕೆ ಬದಲಾಗಿ ಒಂಹಂತ್ತಿಹೊಸ ಕ್ಲಾಜನ್ನು ಇಲ್ಲಿ ತಂದಿದ್ದೇವೆ.

ಶ್ರೀ ವಿ. ಎನ್. ಪಾಟೀಲ್.— ಟೆಕ್ನಿಕಲ್ ಡಿಫಿಕಲ್ಟೀಸ್ ಮತ್ತು ಲೀಗಲ್ ಡಿಫಿಕಲ್ಟೀಸ್ ಏನಿವೆಯೊ ವನ್ನು ಸರಿಮಾಡುವುದಕ್ಕೆ ರೆಗ್ಯುಲೇಷನ್ ರೂಪದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂಬುದಾಗಿ ಳಿದರು, ಆದರೂ ಸಹ ಡೇಟ್ ಲಿಕ್ವಿಡೇಟ್ ಮಾಡುವುದಕ್ಕಾಗುವುದಿಲ್ಲ. ಎಷ್ಟೋ ಸೂಟ್ಸ್, ಡಿಕ್ರೀಸ್, ಪ್ರೊಸೀಡಿಂಗ್ಸ್ ಇನ್ನೂ ಹಾಗೆಯೇ ಕೋರ್ಟ್‌ನಲ್ಲಿ ಉಳಿದಿವೆ. ಸೂಟ್ಸ್ ಇನ್ನೂ ಎಷ್ಟೋ ಫೈಲ್ ಆಗುವು ರಲ್ಲಿವೆ. ಒರಿಜಿನಲ್ ಸೂಟ್ಸ್ ಏನಿವೆಯೋ ಅದಕ್ಕೆ ಈ ಕಾನೂನು ಅಪ್ಲೈಯಾಗುತ್ತದೆ. ಇದರಿಂದ ಎಷ್ಟಿಗೆ ನಮಗೆ ಇಂಟೆನ್‌ಷನ್ ಇರಲಿ. ಇಲ್ಲದೇ ಇರಲಿ ಈಗ ಹೊಸ ತಿದ್ದುಪಡಿಗಳು ಬರುತ್ತಾ ಇವೆ. ರೀತಿ ಹೊಸ ತಿದ್ದುಪಡಿಗಳನ್ನು ಮಾಡುವುದರಿಂದ ಮನಿಲೆಂಡಿಂಗ್ ಕೆಲಸಕ್ಕೆ ಸ್ವಲ್ಪ ಹೆಲ್ಪ್ ಆಗುತ್ತದೆ. ದರಿಂದ ಹೆಚ್ಚಿಗೆ ಎಕ್ಸ್‌ಪ್ಲಾಯ್‌ಟೇಷನ್ ಮಾಡುವುದಕ್ಕೆ ಅನುಕೂಲವಾಗತ್ತದೋ ಇಲ್ಲವೋ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಇದರಲ್ಲಿ ಇನ್ನೂ ಪ್ರಗತಿಪರ ಕಾಯಿದೆಗಳನ್ನು ತಂದಿದ್ದರೆ ಬಹಳ ಚನ್ನಾಗಿತ್ತು. ಆದರೆ ಈಗ ಇರತಕ್ಕ ಕಾಯಿದೆಗಳ ಪ್ರಕಾರ ಎಷ್ಟರಮಟ್ಟಿಗೆ ಅವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವೆಂದು ನಾನು ಕೇಳಬೇಕಾಗಿದೆ. ಈಗ ಕೇವಲ ೨ ಸಾವಿರ ಅಥವಾ ೩ ಸಾವಿರ ರೂಪಾಯಿಗಳನ್ನು ಸಾಲ ಕೊಡಬೇಕಾಗಿದ್ದರೂ ಸಹ ಅವನು ಲೈಸೆನ್ಸ್ ತೆಗೆದುಕೊಂಡು ವ್ಯವಹಾರ ಮಾಡ ಕಾಗಿದೆ. ಲೈಸೆನ್ಸ್ ತೆಗೆದುಕೊಳ್ಳದೆ ಅಂತಹ ವ್ಯವಹಾರವನ್ನು ಮಾಡಬಾರದು, ಅದನ್ನು ಒರಿಜಿನಲ್

ಡೀಡ್‌ನಲ್ಲಿ ಬರೆದುಕೊಳ್ಳಬೇಕಾಗುತ್ತದೆ. ಆದರೆ ಈಗ ರಾಷ್ಟ್ರೀಕರಣವಾಗಿರುವಂಥ ಬ್ಯಾಂಕ್‌ಗಳಲ್ಲಿ ಆಲ್ಟರ್ನೇಟಿವ್ ಆಗಿ ಯಾರಿಗೆ ಸಾಲ ಬೇಕೋ ಅವರಿಗೆ ಸುಲಭ ಬಡ್ಡಿ ದರದಲ್ಲಿ ಕೊಡುವ ಸಂದರ್ಭಗಳು ಅನೇಕ ಸಾರಿ ಬರುತ್ತವೆ.

ಎಲ್ಲಿಯವರೆಗೆ ಸುಲಭ ದರದಲ್ಲಿ ನ್ಯಾಷನಲೈಸ್ಡ್ ಬ್ಯಾಂಕುಗಳು ಮತ್ತು ಕಮರ್ಷಿಯಲ್ ಬ್ಯಾಂಕುಗಳು ಹಣವನ್ನು ಬಡವರಿಗೆ ಮತ್ತು ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಯಾವ ಮಸೂದೆಯನ್ನು ತಂದರೂ ಸಾಮಾನ್ಯ ಜನರಿಗೆ ಸಹಾಯವಾಗುವುದಿಲ್ಲ. ಯಾರು ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಬಡ್ಡಿ ವ್ಯವಹಾರ ಮಾಡುತ್ತಿದ್ದಾರೋ ಅವರಿಂದ ಈ ಬಡ ಜನರನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಯಾವ ಬಿಲ್ಲನ್ನು ತಂದರೂ ಕೂಡ ಅದನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಹೋದರೂ ಅದನ್ನು ಅವರು ಚಾಲೆಂಜ್ ಮಾಡಿ ತೋರಿಸುತ್ತಾರೆ ಯಾರು ಜಮೀನು ಮತ್ತು ಪೀಸ್‌ಮೀಲ್‌ಗಳನ್ನು ಡೀಡುಮಾಡಿ ಹಣತೆಗೆದುಕೊಂಡಿರುತ್ತಾರೆ ಅವರು ಅದನ್ನು ಅಬ್ಸಲೂಟ್ ಸೇಲ್ ಎಂದು ಒರಿಸಿಕೊಂಡಿರುತ್ತಾರೆ. ಆದರ ಒಂದು ಚೌಕಟ್ಟಿನಲ್ಲಿ ಒಂದು ಸಾವಿರಕೊಟ್ಟಿದ್ದರೆ ಎರಡುಸಾವಿರಕ್ಕೆ ಕ್ರಯ ಮಾಡಿಸಿಕೊಂಡಿರುತ್ತಾರೆ, ಆದ್ದರಿಂದ ಕೋರ್ಟ್‌ನಲ್ಲಿ ಡಿಕ್ರೀ ಸೂಟ್ ಮಾಡುತ್ತಾರೆ ಕೋರ್ಟಿನಲ್ಲಿ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳುವುದಷ್ಟು ಶಕ್ತಿ ಈ ಬಡಜನರಿಗೆ ಎಲ್ಲಿ ಇರುತ್ತದೆ ? ಆದ್ದರಿಂದ ಈ ಬಡಜನರಿಗೆ ಸುಲಭ ದರದಲ್ಲಿ ಹಣ ಸಿಕ್ಕುವಂತೆ ಆಗಬೇಕು ಈಗ ಏನು ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ ಅದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಅದಕ್ಕೆ ನಿಯೋಜಿತರಾಗಿರುವ ಮೆಷನರಿ ಅಂದರೆ ಅಧಿಕಾರಿಗಳು ಬಹಳ ಹಾನೆಸ್ಟ್ ಆಗಿರಬೇಕು. ಜೊತೆಗೆ ಕೆಲವು ಸಮಯದಲ್ಲಿ ಅವರನ್ನು ಬಿಟ್ರೈ ಮಾಡುತ್ತಾರೆ. ಆದಕ್ಕೆ ಈ ಮೆಷನರಿ ಸ್ಟ್ರಿಕ್ಟ್ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು. ಇದೇ ಡೆಟ್ ರಿಲೀಫ್ ಆಕ್ಟ್ ಮಾಡಿದ್ದೀರಿ, ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಒಬ್ಬ ಅಧಿಕಾರಿ ಸಿನ್ಸೀಯರ್ ವರ್ಕ್ ಮಾಡಿದರೆ ಆ ಅಧಿಕಾರಿಯ ಮೇಲೆ ನೂರಾರು ದೂರುಗಳು ಬರುತ್ತವೆ. ಆದ್ದರಿಂದ ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ ಆದರೆ ಯಾವುದೇ ಕಾಯಿದೆ ಮಾಡಿದರೆ ಅದಕ್ಕೆ ಅಲ್ಟರ್ನೇಟಿವ್ ಕಾಯಿದೆ ಮಾಡಿದರೆ ಅದು ಅದಕ್ಕೆ ಸಹಾಯ ಮಾಡಿದಂತಾಗುತ್ತದೆ ಎನ್ನುವುದು ನನ್ನ ಭಾವನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ ಸನ್ಮಾನ್ಯ ಅಧ್ಯಕ್ಷರೇ, ಈ ಕಾನೂನಿನಲ್ಲಿ ಇರತಕ್ಕಂಥ ಮೂಲ ತತ್ವವನ್ನು ಮಾನ್ಯ ಸಭೆ ಒಪ್ಪಿದೆ. ಅದರಲ್ಲಿ ಮಾನ್ಯ ಬಾಂಗಿಯವರು, ನಾಗಣ್ಣನವರು, ಶಾಮಣ್ಣನವರು, ಚಂದ್ರಶೇಖರಪ್ಪನವರು ಹಾಗೂ ಇನ್ನು ಕೆಲವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಚಂದ್ರಶೇಖರ್‌ರವರು ಏನು ಸೆಕ್ಷನ್ ೧೧ರ ಕೋರ್ಟ್ ಅಧಿಕಾರ ಕೊಡುತ್ತದೆ ಎಂದು ಕೆಲವರು ಲೈಸನ್ಸ್ ತೆಗೆದುಕೊಂಡಿಲ್ಲ ಅವರಿಗೆ ಸರ್ಕಾರ ಸ್ವಲ್ಪ ಕರುಣೆ ತೋರಿಸಬೇಕೆಂದು ಹೇಳಿದ್ದಾರೆ. ಸೆಕ್ಷನ್ ೫ರ ಪ್ರಕಾರ ಲೇವಾದೇವಿದಾರ ಲೈಸೆನ್ಸ್ ತೆಗೆದುಕೊಳ್ಳಲೇಬೇಕು ಎಂದು ಇದೆ. ಸೆಕ್ಷನ್(೧೧ ಏನು ಎಂದರೆ..."Stay of suits by money-lenders not holding license." Under this caption it is said; "after the expiry of six months from the date on which this Act comes into force, no court shall pass a decree in favour of a money-lender." ಎಂದು ಇದೆ.

ಈಗ ನಾವು ತಂದಿರತಕ್ಕಂಥ ತಿದ್ದುಪಡಿಯಲ್ಲಿ ಸಬ್‌ಕ್ಲಾಸ್ ೩ನ್ನು ಡಿಲೀಟ್ ಮಾಡುತ್ತಿದ್ದೇವೆ. ದಯಮಾಡಿ ಅದನ್ನು ಓದಿದರೆ ಸಬ್‌ಕ್ಲಾಸ್ ಒಂದು.....

"After the expiry of six months, no court shall pass a decree" ಎಂದು ಇದೆ, We have already amended that, ಸೆಕ್ಷನ್ ೧೧ರ ಪ್ರಕಾರ ಲೈಸೆನ್ಸ್ ಇಲ್ಲದೆ ಇರತಕ್ಕಂಥ ಜನರು ಲೇವಾದೇವಿ ನಡಾಯುವ ಹಕ್ಕನ್ನು ಕಳೆದು ಕೊಳ್ಳುತ್ತಾರೆ. ಇದು ಅದರ ಮೂಲ ಉದ್ದೇಶವಾಗಿತ್ತದೆ ಸೆಕ್ಷನ್ ೧೧ರ ಪ್ರಕಾರ ವಕೀಲರಿಗೆ ಹೇಳಿ ಅರ್ಜಿ ಹಾಕಿದರೆ ಲೈಸೆನ್ಸ್ ತೆಗೆದುಕೊಳ್ಳದೆ ವ್ಯವಹಾರ ಮಾಡುವುದಕ್ಕೆ ಸಾಧ್ಯ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಕಾರಣಾಂತದಿಂದ, ಮಾನ್ಯ ಬಂಗಿಯವರು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ, ಅದು ಏನು ಎಂದರೆ ಸಣ್ಣಸಣ್ಣ ಟ್ರೇಡರ್ ಎಂದು ಏನಾದರೂ ವಿನಾಯಿತಿ ಕೊಟ್ಟರೆ ಅವರಿಂದಲೂ ಕೆಲವು ತೊಂದರೆಗಳು ಬರಬಹುದೆಂದು ಹೇಳಿದ್ದಾರೆ. ನಾನು ಅದನ್ನು ವಿಚಾರಮಾಡುತ್ತೇನೆ. ಮಾನ್ಯ ನಾಗಣ್ಣನವರು ಸಾಮಾನ್ಯವಾಗಿ ಕೆಲವು ಜನ ರಕ್ಷಣೆ ಇಲ್ಲದ ಇರತಕ್ಕಂಥವರು ತಮ್ಮ ಒಡವೆ ವಸ್ತುಗಳನ್ನು ಇಟ್ಟುಹಣವನ್ನು ತೆಗೆದುಕೊಂಡಿರುತ್ತಾರೆಂದು ಹೇಳಿದರು,

ನಾನು ಅವರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ, ಕೋಪರೇಟೀವ್ ಸೊಸೈಟಿಗಳಲ್ಲಿ ಡಿಪಾಸಿಟಿಂಗ್ ಸ್ಕೀಮ್ ಒಂದನ್ನು ಮಾಡಿದ್ದೇವೆ. ಯಾರಾದರು ಹಣವನ್ನು ಇಡುವುದ್ದಾರೆ ಅಥವ ಒಡವೆಗಳನ್ನು ಇಟ್ಟು ಹಣವನ್ನು ತೆಗೆದುಕೊಳ್ಳುವುದಾದರೆ ಹಣ ಇಂತಹ ಸಹಕಾರ ಸಂಘಗಳ ಸೊಸೈಟಿ ಮತ್ತು ಸಹಕಾರ ಬ್ಯಾಂಕ್‌ಗಳಲ್ಲಿ ಇಟ್ಟು ತೆಗೆದುಕೊಳ್ಳಲಿ ಹಣ ಇರುವವರು ಬೇರೆಯವರ ಒಡವೆಯನ್ನು ಗಳನ್ನು ಇಟ್ಟುಕೊಂಡು ಹಣಕೊಡುವುದಕ್ಕೆ ಲೈಸೆನ್ ತೆಗೆದುಕೊಳ್ಳಬೇಕಾಗುತ್ತದೆ. ಅಂತಹವರು ಸೊಸೈಟಿಗಳಲ್ಲಿ ಹಣವನ್ನು ಇಟ್ಟರೆ ೧೫ ಪರ್ಸೆಂಟ್ ಬಡ್ಡಿಯನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ Providing for deposit Insurance Scheme I am going to see that all deposits are issured by every Co-operative Bank which takes up this Banking business ಅವರು ಇಟ್ಟ ಹಣಕ್ಕೆ ಇನ್‌ಸ್ಯೂರೆನ್ಸ್ ಕೂಡಮಾಡಿ ಅವರ ಹಣವನ್ನು ಜೋಪಾನ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ, ಅವರ ಹಣಕ್ಕೆ ಅಷ್ಟು, ಭದ್ರತೆ ಇರುತ್ತದೆ. ಅದಕ್ಕೆಲ್ಲಾ ಸೂಕ್ತ ಏರ್ಪಾಡು ಮಾಡಲಾಗಿದೆ. ಇಂತಹ ಒಂದು ರಕ್ಷಣೆ ಆಲ್ಲದೆ ಬಡ್ಡಿಯನ್ನು ಕೂಡ ಸಂಪಾದಿಸಬಹುದು. ಜೊತೆಗೆ ಯಾವ ತೊಂದರೆಯೂ ಇರುವುದಿಲ್ಲ. ಲೈಸನ್ಸ್ ತೆಗೆದುಕೊಡು ವ್ಯವಹಾರ ಮಾಡುವುದಾದರೆ ಲೈಸೆನ್ಸ್ ತೆಗೆದುಕೊಳ್ಳಬೇಕು, ಅದನ್ನು ರಿನ್ಯೂ ಮಾಡಿಸಬೇಕು ಇದೆಲ್ಲಾ ಬಹಳ ತೊಂದರೆಯ ಕೆಲಸ. ಆದ್ದರಿಂದ ನಮ್ಮ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಏರ್ಪಾಡು ಮಾಡಿರುವ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಿ ಎಂದು ಹೇಳುತ್ತೇನೆ. ಮೊದಲು ಠೇವಣಿದಾರರಿಗೆ ಡಿವಿಡೆಂಡ್ ೬ ಪರ್ಸೆಂಟ್ ಕೊಡಬೇಕಾದರೆ ಸರ್ಕಾರಕ್ಕೆ ಬರಬೇಕಾಗಿತ್ತು ಈಗ ೧೦ ಪರ್ಸೆಂಟ್ ಕೊಡಬೇಕಾದರೂ ಸರ್ಕಾರಕ್ಕೆ ಬರಬೇಕಾದ ಪ್ರಮೇಯವಿಲ್ಲ. ನಮ್ಮ ಡಿಪ್ಯೂಟಿ, ಜಾಯಿಂಟ್ ಹಾಗೂ ರಿಜಿಸ್ಟ್ರಾರ್‌ಗೆ ಅಧಿಕಾರ ಕೊಟ್ಟಿದ್ದೇವೆ. ಮಾನ್ಯ ಶ್ರೀ ಬಂಗಿಯವರು ಮತ್ತು ಇನ್ನು ಕೆಲವು ಮಿತ್ರರು ಬರೀ ಪ್ರಾಮಿಸರಿ ನೋಟು ಬರೆಸಿಕೊಳ್ಳುತ್ತಾ, ಇಲ್ಲ ಕ್ರಯವನ್ನೇ ಮಾಡಿಸಿಕೊಳ್ಳುತ್ತಾರೆಂದು ಹೇಳಿದರು. ಆಧಾರ ಮತ್ತು ಕ್ರಯ ಇದರಲ್ಲಿ ಬರುವುದಿಲ್ಲ. ಅದು ಸೆಂಟ್ರಲ್ ಆಕ್ಟ್‌ನಲ್ಲಿ ಬರತಕ್ಕಂಥಾದ್ದು.

ಅದು ಬೇರೆ ಇದೆ ಆದರೆ ಒಂದು ವಿಚಾರವನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದ್ಯಂತ ಅವರ ಅಭಿಪ್ರಾಯವನ್ನು ಸ್ಪಷ್ಟ ಪಡಿಸಿದ್ದಾರೆ. ಈ ಸಣ್ಣ ಜನರನ್ನು ಶೋಷಣೆ ಮಾಡತಕ್ಕಂಥ ಜನ ಏನಿದ್ದಾರೆ ಅವರು ಸಣ್ಣ ಪುಟ್ಟ ಸಾಲವನ್ನು ಕೊಡುವಾಗ ಪ್ರಾಮಿಸರಿ ನೋಟ್ ಕೂಡ ಬರೆಯಿಸದೇ ಒಂದು ನಂಬಿಕೆಯ ಮೇಲೆ ವ್ಯವಹಾರವನ್ನು ಮಾಡಿಕೊಂಡಿದ್ದಾರೆ ಅದಕ್ಕೆ ನಾವು ಯಾವ ರೀತಿ ಪರಿಹಾರವನ್ನು ಕೊಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಅದಕ್ಕೆ ನಾವೊಂದು ಕಾನೂನು ತರುತ್ತೇವೆ ಎನ್ನುವ ಅಭಿಪ್ರಾಯವನ್ನು ಇಲ್ಲಿ ವ್ಯಕ್ತ ಪಡಿಸುತ್ತೇನೆ. ಆದುದರಿಂದ ಇವತ್ತು ನಂಬಿಕೆಯ ಮೇಲೆ ಹಣವನ್ನು ಕೊಟ್ಟು ಯಾರು ಶೋಷಣೆಗೆ ಒಳಗಾಗಿದ್ದಾರೆ ಅಂಥ ಜನರಿಗೂ ಕೂಡ ರಕ್ಷಣೆ ಕೊಡತಕ್ಕಂಥದರ ಬಗ್ಗೆ ಸರ್ಕಾರದ ಮನಸ್ಸಿನಲ್ಲಿದೆ. ಅದರ ಬಗ್ಗೆ ಹೇಗೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಾ ಮಾನ್ಯ ಕಾಗೋಡು ತಿಮ್ಮಪ್ಪನವರು ಲೈಸನ್ಸ್ ಕೊಡಿ ಎನ್ನುವ ಅರ್ಥ ಬರುವ ಹಾಗೆ ಮತ್ತು ಆ ಅರ್ಥಬಾರದ ಹಾಗೆಯೂ ಮಾತನಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ.— ಎಗ್ಜಿಕ್ಯೂಷನ್ ಪೆಂಡಿಂಗ್ ಕೇಸ್ ಏನಾಗುತ್ತದೆ ?

ಶ್ರೀ ಕೆ. ಎಚ್ ರಂಗನಾಥ್.— ಅಧ್ಯಕ್ಷರೇ, ಅವಾಗ ಲಾಯರ್ ನಾನು ಕೂಡ ಸುಮಾರು ದಿವಸ ಲಾಯರ್ ಆಗಿ ಪ್ರಾಕ್ಟೀಸ್ ಮಾಡಿದ್ದೇನೆ. ಸೆಕ್ಷನ್ ೧೧೧ ಪ್ರಕಾರ, To stay the proceedings that was the right vested in the Court and the discretionary power was vested in the Judge. and in exercise of that power, he used to pass the Judgement and decree which was final. Supposing such decrees are under execution . In the beginning itself I submitted to the House that this is a regulatory measure and not a measure which has been introduced to abolish or done away with some debt. ಈ ತರಹದ ಕಾನೂನನ್ನು ಸೇರಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯಕ್ಕೆ ಬಂದಂದರಿಂದ ಕಾನೂನು ಇಲಾಖೆಯವರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಯಿತು. ಇವತ್ತು ಏನು ಪೆಂಡಿಂಗ್ ಸ್ಯೂಟ್ಸ್ ಇವೆ ಅವು ನಮ್ಮ ಕಾನೂನಿನ ಪ್ರಕಾರ ಜಾರಿಗೆ ಬಂದ ದಿವಸದಿಂದ ಮತ್ತು ಬೇರೆ ಯಾವುದು ದಾಖಲು ಆಗಿರುತ್ತದೆ ಅವರಿಗೆ ಸಬ್ ಕ್ಲಾಜ್ ೨-೩ರ ಪ್ರಕಾರ ಅವಕಾಶ ದೊರೆಯುತ್ತದೆ. ಈ ದಿವಸ ಎಗ್ಜಿಕ್ಯೂಷನ್

ಡಿಕ್ರಿ ಅಮಲು ಜಾರಿಯಲ್ಲಿರುವುದರಿಂದ ಅದಕ್ಕೆ ಅನ್ಯಾಯವಾಗುತ್ತದೆ. ಕಾನೂನು ಬಂದ ನಂತರ ದಾವೆ ಹಾಕಕ್ಕಂಥವರಿಗೆ ದಾವೆ ಅನ್ವಯಿಸುವುದಿಲ್ಲ. ನಾವು ಲೈಸನ ಕೊಡುತ್ತೇವೆ ಎಂದರೆ ಎಲ್ಲರೂ ಲೈಸನ್ಸ್ ಕೊಡಿ ನಾವು ತೆಗೆದುಕೊಳ್ಳುತ್ತೇವೆಂದು ಬಂದು ಬಿಡುತ್ತಾರೆ. ಅದು ದೊಡ್ಡ ಕೆಲಸವಾಗುತ್ತದೆ. ಡೆಬ್ಟ್ ರಿಲೀಫ್ ತಂದುದರಿಂದ ಎಷ್ಟೋ ಜನ ಪಾನ್ ಬ್ರೋಕರ್ಸ್, ಬ್ರೋಕರ್ಸ್ ಕೋರ್ಟಿಗೆ ಹೋದರೂ ಅಲ್ಲಿ ವ್ಯವಹಾರ ನಡೆಯಂತ್ತಿದೆ ಪರಿಸ್ಥಿತಿ ಹೀಗಿರುವಾಗ ಅಂಥವರ ಫೀಜ್ ಕಟ್ಟಿ ಲೈಸನ್ಸ್ ಪಡೆದರೆ ನಮ್ಮ ಕಾನೂನಿನ ಉದ್ದೇಶವೇ ಈಡೇರಿದಂತಾಗುವುದಿಲ್ಲ. ನಮ್ಮ ಉದ್ದೇಶಕ್ಕೇ ತೊಂದರೆಯಾಗುತ್ತದೆ ಎನ್ನುವ ಅಭಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ — ಒಬ್ಬ ೧೦ ದಾವ ಹಾಕಿರುತ್ತಾನೆ. The defendant did not raise the contention that he was not holding any money lending license. The Court did not also observe whether he holds a license or not, but simply passed a decree and it is now under process of execution. In such cases what is to be done?

SRI K. H. RANGANATH.— If the defendant raises the plea that he is not a licensed money lender, he is not entitled for the decree. Than the plaintiff may move for a decree saying that he would obtain a license as per Section 12. ಆದುದರಿಂದ ಹಾಕಿದ್ದೇವೆ. ನಾವು ಕಾನೂನಂ ಮಾಡುವಾಗ ಎಲ್ಲವನ್ನೂ ಫುಲ್ ಪ್ರೂಫ್ ಆಗಿ ಮಾಡುವುದಕ್ಕೆ ಸಾಧ್ಯವಿಲ್ಲ ಹಾಗೆ ಮಾಡಿದರೆ ಕೋರ್ಟ್‌ನ್ನು, ಲಾ ಕಾಲೇಜ್‌ನ್ನು ಮುಚ್ಚಬೇಕಾಗುತ್ತದೆ ಅಂಥ ಕೆಲಸವನ್ನು ನಾವು ಮಾಡುವುದಕ್ಕೆ ಹೊರಟಿಲ್ಲ. ಆದುದರಿಂದ ವಿಷಯವಿರತಕ್ಕಂಥದ್ದು ಇಷ್ಟೇ, ಇದಕ್ಕೆ ಮಾನ್ಯ ಸಭೆಯಂ ಒಪ್ಪಿಗೆ ಕೊಡಬೇಕೆಂದು ಕೇಳಿ ಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.— The question is,—

"That the Karnataka Money Lenders (Amendment) Bill 1976, be taken in to consideration."

The motion was adopted

CLAUSES 2-7

MADAM SPEAKER.— The question is

"That Clauses 2 to 7 both inclusive, do stand part of the Bill."

The motion was adopted

Clauses 2 to 7, both inclusive were added to the Bill.

CLAUSES 8

SRI K H. RANGANATH.— I beg to move.

"That for Clause 8, the following clause shall be substituted namely .—

"8. Pending Suits, etc.— Notwithstanding the amendments of section 11 of the principal Act made by section 3 of this Act all suits and all further proceedings arising there-

from (including proceedings in execution) pending on the date of commencement of this Act shall be disposed of in accordance with the principal Act as if the said section had not been amended."

MADAM SPEAKER.— Amendment moved

"That for Clause 8, the following clause shall be substituted namely.—

"8. Pending Suits, etc—Notwithstanding the amendment of section 11 of the principal Act made by section 3 of this Act all suits and all farther proceedings arising therefrom (including proceeding in execution) pending on the date of commencement of this Act shall be disposed of in accordance with the principal Act as if the said section had not been amended."

ಶ್ರೀ ಕೆ. ಎಚ್. ರಂಗಸ್ವಾಮಿ — ಮಾನ್ಯ ಅಧ್ಯಕ್ಷಣೀಯರೇ, ನಾನು ಇದರ ಬಗ್ಗೆ ಈಗಾಗಲೇ ಪ್ರಾಸ್ತಾಪ ಮಾಡಿ ಹೇಳಿದ್ದೇನೆ. ವಿನಃ ಹೇಳಬೇಕಾದ್ದು ಏನೂ ಇಲ್ಲವಾದ್ದರಿಂದ ಈ ಸಭೆಯು ಈ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—The question is :

"That for Clause 8, the following cluse shall be substituted namely.—

"8. Pending Suits, etc.— Notwithstanding the amendment of section 11 of the principal Act made by section 3 of this Act all suits and all further proceedings arising therefrom (including proceedings in execution) pending on the date of commencement of this Act shall be disposed of in accordance with the principal Act as if the said section had not been amendmed."

The amendment was adopted, and Clause 8 was substituted.

CLAUSES 1 etc

MADAM SPEAKER.—The question is.—

"That Clause 1 the Long Title the Preamble and the Enacting Formula do stand part of the Bill."

The motion was adopted

Clause 1 the Long Title the Preamble and the Enacting Formula were added to the Bill.

Motion to pass

SRI K. H. RANGANATH.— I beg to move

"That the Karnataka Money Lenders (Amendment) Bill, 1976, as amended, be passed."

MADAM SPEAKER,— The question is :

"That the Karnataka Money Lenders (Amendment) Bill, 1976, as amended be passed"

The motion was adopted and the Bill, as amended was passed.

KARNATAKA DEBT RELIEF BILL, 1976,

Motion to Consider

SRI K. H. RANGANATH (Minister for Co-operation). — I move :

"That the Karnataka Debt Relief Bill, 197 be taken in to consideration."

MADAM SPEAKER . - Motion moved

"That the Karnataka Debt Relief Bill, 1976, be taken into consideration."

† ಶ್ರೀ ಕೆ. ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ ಇದರಲ್ಲಿ ಬಹಳ ಒದಲಾವಣೆಗಳನು ಏನೂ ಮಾಡಿಲ್ಲ. ಈಗ ಇರುವ ಹಾಗೆ ಹೇಳಿದತಕ್ಕಂಥ ಕಾನೂನಿನಲ್ಲಿ ಸಬ್ ಡಿವಿಜನ್ ಅಫೀಸರ ರವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಈ ಕಾನೂನಿನಂತೆ ಏರ್ಪಾಡನ್ನು ಮಾಡುವಾಗ ಸ್ವಲ್ಪ ತೊಂದರೆ ಬಂದು ದರಿಂದ ಈ ಅಧಿಕಾರವನ್ನು ಮ್ಯಾಜಿಸ್ಟ್ರೇಟರವರಿಗೆ ಕೊಡಬೇಕು ಎನ್ನತಕ್ಕಂಥ ಉದ್ದೇಶದಿಂದ ತಿದ್ದು ಪಡಿಯನ್ನು ತರಲಾಗಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು ೩,೯೬೧ ಲೈಸನ್ಸ್ಡ್ ಮನಿಲೆಂಡರ್ಸ್ ಇದ್ದಾರೆ. ೩,೩೨೫ ಪಾನ್ ಬ್ರೋಕರ್ಸ್ ಇದ್ದಾರೆ. ಇವರಲ್ಲಿ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತಂದಿರತಕ್ಕದ್ದು ಉಂಟು. ಈ ಕಾನೂನು ಬಂದ ಮೇಲೆ ಇಲ್ಲಿಯವರೆಗೆ ಅಂದರೆ ಅಕ್ಟೋಬರ್ ತಿಂಗಳ ೨೧ನೇ ತಾರೀಖಿನವರೆಗೆ ೧ ಲಕ್ಷದ ೨೫ ಸಾವಿರದ ೪೬೦ ಜನ ಇದರಿಂದಾ ಅನುಕೂಲವನ್ನು ಪಡೆದಿದ್ದಾರೆ ಋಣ ವಿಮುಕ್ತ ಪರಿಹಾರ ಕಾಯ್ದೆಯಿಂದ ಅನುಕೂಲವನ್ನು ಹೊಂದಿದ್ದಾರೆ ಅದರಿಂದ ಹಣ ಎಷ್ಟರ ಮಟ್ಟಿಗೆ ಬಿಡುಗಡೆಯಾಗಿದೆ ಎಂದರೆ ಒಟ್ಟು ೭ ಕೋಟಿ ೯೭ ಲಕ್ಷದ ೧೯ ಸಾವಿರದ ೩ ೭ ರೂಪಾಯಿಗಳ ಹಣ ಇಲ್ಲಿಯವರೆಗೆ ಬಿಡುಗಡೆ ಮಾಡಲು ಟ್ಟಿದೆ ಇದರಲ್ಲಿ ೧ ಲಕ್ಷದ ೨೫ ಸಾವಿರದ ೪೬೦ ಜನಕ್ಕೆ ಪರಿಹಾರ ಕೊಟ್ಟಿದ್ದೇವೆ ಇದರಲ್ಲಿ ೩೨,೫೩೪ ಜನ ಹರಿಜನರು, ೨ ೩೪೬ ಗಿರಿಜನರು ಇದ್ದಾರೆ. ೭ ಕೋಟಿ ೯೭ ಲಕ್ಷ ರೂಪಾಯಿಗಳಲ್ಲಿ ಇವರಿಂದ ಬಿಡುಗಡೆ ಆದಂಥದ್ದು ೧ ಕೋಟಿ ೩೭ ಲಕ್ಷದ ೪೭ ಸಾವಿರದ ೩೩೭ ಮತ್ತು ೧೧ ಲಕ್ಷದ ೧೧ ಸಾವಿರದ ೩೭೫ ಅಂದರೆ ಸುಮಾರು ೧ ಕೋಟಿ ೫೧ ಲಕ್ಷ ರೂಪಾಯಿಗಳು ಹರಿಜನ ಗಿರಿಜನ ರಿಂದವಸೂಲಾಗಿದೆ ಇಷ್ಟು ವ್ಯಾಪಕವಾಗಿರತಕ್ಕಂಥ ಕಾನೂನನ್ನು ಜಾರಿಗೆ ಕೊಡಬೇಕಾದರೆ ಸಬ್‌ಡಿವಿಜನಲ್ ಅಫೀಸರ್‌ರವರಿಗೆ ಅಧಿಕಾರವನ್ನು ಕೊಟ್ಟರೆ ಅವರು ಅದನ್ನು ಶೀಘ್ರಗತಿಯಲ್ಲಿ ಜನರಿಗೆ ಜಾರಿಗೆ ಕೊಡ ಲಾಗುವುದಿಲ್ಲ. ಈ ದೃಷ್ಟಿಯಿಂದ ಈ ಅಧಿಕಾರವನ್ನು ತಹಶೀಲ್ದಾರರ ಮಟ್ಟದಲ್ಲಿ ಅಧಿಕಾರವನ್ನು ಡೆಲಿ ಗೇಟ್ ಮಾಡಬೇಕೆಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರಲ್ಲಿ ಇನ್ನು ಹೆಚ್ಚು ವಿಷಯ ಇಲ್ಲ. ಈ ತಿದ್ದು ಪಡಿಯು ಆಡಳಿತದ ದೃಷ್ಟಿಯಿಂದ ಅನುಕೂಲದಾಯಕವಾಗಿರುವುದರಿಂದ ಮಾನ್ಯ ಸಭೆಯಂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿ ವನ್ನ ಮಾತನ್ನು ಮುಗಿಸುತ್ತೇನೆ.